# ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 ಸಂಚಿಕೆ 31 ಜುಲೈ 31, 1983 ಬೆಲೆ 60 ಪೈಸೆ


## ಪುರಸಭೆ, ನಗರಸಭೆಯ ಸಮಸ್ಯೆಗಳು

# ಸದಸ್ಯರ ಮುಂದಿರುವ ಜವಾಬ್ದಾರಿ

-ಎನ್. ಕೆ. ಉಪಾಧ್ಯಾಯ

ಕರ್ನಾಟಕ ರಾಜ್ಯದ ನೂರೈವತ್ತಕ್ಕೂ ಮೇಲ್ಪಟ್ಟ ಪುರಸಭೆಗಳಿಗೂ ಮೈಸೂರು, ಬೆಂಗಳೂರು ಹುಬ್ಬಳ್ಳಿ-ಧಾರವಾಡ ನಗರ ಕಾರ್ಪೊರೇಶನ್‌ಗಳಿಗೂ ಜುಲೈ 31 ಹಾಗೂ ಆಗಸ್ಟ್ 7ರಂದು ಚುನಾವಣೆ ನಡೆಯಲಿದೆ. ಎಲ್ಲ ರಾಜಕೀಯ ಪಕ್ಷಗಳೂ ಚುನಾವಣಾ ರಂಗಕ್ಕೆ ಧುಮುಕಿವೆ. ಭರದಿಂದ ಪ್ರಚಾರ ಪ್ರಾರಂಭವಾಗಿದೆ. ಪತ್ರಿಕೆ ಓದುಗರ ಕೈಸೇರುವಾಗ ಪರಿಣಾಮಗಳೂ ಬಿತ್ತರಿಸಲ್ಪಡುತ್ತವೆ.

### ಚುನಾವಣೆಯ ವೈಶಿಷ್ಟ್ಯ

ಹಿಂದಿನ ಚುನಾವಣೆಗಳಿಗಿಂತಲೂ ಇಂದಿನ ಚುನಾವಣೆಗೆ ರಾಜಕೀಯ ಮಹತ್ವವಿದೆ. ಕಾರ್ಪೊರೇಶನ್ ಮತ್ತು ಪುರಸಭೆಗಳಿಗೆ ಈ ಹಿಂದೆ ನಡೆದ ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳು ನೇರವಾಗಿ ಪಾಲ್ಗೊಳ್ಳುತ್ತಿರಲಿಲ್ಲ. ಕಮ್ಯುನಿಸ್ಟ್ ಪಾರ್ಟಿಯವರು ಮಾತ್ರ ಧೈರ್ಯದಿಂದ ತಮ್ಮ ಚಿನ್ಹೆ ಉಪಯೋಗಿಸಿ ಸ್ಪರ್ಧಿಸುತ್ತಿದ್ದರು. ಇತರ ಯಾವ ಪಕ್ಷಕ್ಕೂ ಅಂಥ ಧೈರ್ಯ ಇರಲಿಲ್ಲ. ಲೋಕಸಭೆ, ವಿಧಾನಸಭೆ ಚುನಾವಣೆಗೂ, ನಗರಸಭೆ ಚುನಾವಣೆಗೂ ವ್ಯತ್ಯಾಸವಿದೆ ನಮ್ಮ ರಾಜ್ಯದಲ್ಲಿ. ಪಾರ್ಟಿಯ ರಾಜಕೀಯ ತತ್ವವನ್ನು ಬಹು ಸಂಖ್ಯಾತ ಜನತೆ ತಿಳಿದುಕೊಳ್ಳದಿರುವುದರಿಂದ, ಜಾತಿ, ಧರ್ಮ, ಹಣದ ಪ್ರಭಾವ, ಸ್ಥಳೀಯ ಮಟ್ಟಿಗೆ ಅಖಿಲ ಭಾರತ ಮಟ್ಟದ ಪ್ರಭಾವಗಳೇ ಚುನಾವಣೆಯ ಮೇಲೆ ಪ್ರಭಾವ ಬೀರುತ್ತವೆ. ಗ್ರಾಮಾಂತರದಲ್ಲಂತೂ ಕೆಲವೇ ಹಿರಿಯರ ಹೇಳಿಕೆಯಂತೆ ಮತ ನೀಡುವ ಪದ್ಧತಿ ಇದೆ. ಪೇಟೆಯಲ್ಲಿ ಕೂಡ ಜಾತಿಯ ಆಧಾರದಲ್ಲೇ, ಕೆಲವು ಮುಖಂಡರ ಪ್ರಭಾವದಿಂದಲೇ ಮತ ಚಲಾವಣೆಯಾಗುತ್ತಿದೆ.

ನಗರಸಭೆ ಚುನಾವಣೆಯಲ್ಲಿ ವಿಶಾಲ ದೃಷ್ಟಿಕೋನ, ದೇಶ, ರಾಜ್ಯದ ರಾಜಕೀಯದ ಆಟ ನಡೆಯದಿರುವುದು ಎದ್ದು ಕಾಣುತ್ತದೆ. ಒಂದು ಕ್ಷೇತ್ರದಲ್ಲಿ ರಾಜಕೀಯ ಪಕ್ಷ ವಿಧಾನಸಭೆಗೆ ಗೆದ್ದು ಬಂದಿದ್ದರೂ ನಗರಸಭೆ ಚುನಾವಣೆಯಲ್ಲಿ ಗದ್ದ ಉಮೇದುವಾರರ ಪಕ್ಷದವರನ್ನೆ ಸ್ಪರ್ಧೆಗಿಳಿಸಿದ್ದರೂ ಕೂಡ ಅಂಥವರು ಸೋಲುವ ಸಂಭವವಿತ್ತು, ಈಗಲೂ ಇದೆ.

ದಿಲ್ಲಿ, ಬೆಂಗಳೂರು ರಾಜಕಾರಣ ದೂರದಲ್ಲಿದ್ದು, ನಗರಸಭೆ, ಕಾರ್ಪೊರೇಶನ್‌ಗಳ ಆಡಳಿತದಾರರಿಗೆ ಅತಿ ಸಮೀಪದಲ್ಲಿರುವುದರಿಂದ ತಮ್ಮ ದೈನಂದಿನ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವ ಸಾಧನೆಗಳಾಗಿರುವುದರಿಂದ, ಅತಿ ಸುಲಭವಾಗಿ ತಮ್ಮ ಕೈಗೆ ಎಟಕುವ, ನಿಷ್ಠೆಯಿಂದ ತಮ್ಮ ದಿನನಿತ್ಯದ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಜನರನ್ನೇ ಮತದಾರರು ಆರಿಸಿ ತರಲಿಕ್ಕೆ ಪ್ರಯತ್ನ ಮಾಡುತ್ತಾರೆ. ಈ ಕೆಲಸಗಳಿಗೆ ರಾಜಕೀಯವನ್ನು ಹೊಂದಿಸಿಕೊಳ್ಳುವುದಿಲ್ಲ.

ನಗರಸಭೆಗಳ ಆಡಳಿತೆಗೂ, ರಾಜ್ಯದ ಆಡಳಿತೆಗೂ, ನಗರಸಭಾ ಸದಸ್ಯರಿಗೂ, ರಾಜಕೀಯಕ್ಕೂ ನೇರವಾದ ಸಂಬಂಧಗಳಿರಬೇಕು. ಹಾಗಾದರೆ ಮಾತ್ರ ತಾವೆದುರಿಸುತ್ತಿರುವ ಸ್ಥಳೀಯ ಸಂಸ್ಥೆಗಳ, ನಗರಗಳ ಸಮಸ್ಯೆಗಳಿಗೆ ಸಮರ್ಪಕ ಪರಿಹಾರ ಕಂಡುಹಿಡಿಯಲು. ಅದನ್ನು ಒದಗಿಸಲು ಸಾಧ್ಯವೆಂಬುದನ್ನು ಜನರು ತಿಳಿದುಕೊಳ್ಳುವುದು ಅತ್ಯಗತ್ಯ. ಪಶ್ಚಿಮ ಬಂಗಾಲ, ಕೇರಳ, ತ್ರಿಪುರಾದ ಜನತೆ-ರಾಜಕೀಯವಾಗಿ ಮೇಲ್ಮಟ್ಟದ ತಿಳುವಳಿಕೆಯನ್ನು ಹೊಂದಿದ ನಾಗರೀಕರು-ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿಯೂ ರಾಜಕೀಯ ಪಕ್ಷಗಳ, ಕಾರ್ಯಕ್ರಮಗಳ, ಧ್ಯೇಯ-ಧೋರಣೆಗಳ ಅಗತ್ಯವಿದೆಯೆಂಬುದನ್ನು ತಿಳಿದುಕೊಂಡಿದ್ದಾರೆ. ಕರ್ನಾಟಕದ ಜನರಿಗೂ, ಇಲ್ಲಿಯ ರಾಜಕೀಯ ಪಕ್ಷಗಳಿಗೂ ಅಂಥ ತಿಳುವಳಿಗೆ ಇಲ್ಲದಿರುವುದರಿಂದ ಜಾತಿ ಮತ್ತು ಹಣದ ಪ್ರಭಾವದಿಂದಲೇ ಚುನಾವಣೆಯ ಕಣಕ್ಕಿಳಿಯುತ್ತಾರಲ್ಲದೆ, ರಾಜಕೀಯ ಕಾರ್ಯಕ್ರಮದ ಆಧಾರದಲ್ಲಿ ಅಲ್ಲ.

ಆದರೆ ಈ ಸಲ ರಾಜ್ಯದ ರಾಜಕೀಯದಲ್ಲಿ ಬದಲಾವಣೆಯಾಗಿ, ಜನತಾ ಪಕ್ಷ ಅಧಿಕಾರದಲ್ಲಿ ಬಂದಿದೆ. ಈಗ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯುತ್ತಿರುವುದರಿಂದ ಅವುಗಳಲ್ಲಿ ರಾಜಕೀಯ ಪಕ್ಷಗಳು ಸ್ಪರ್ಧಿಸಬಹುದೆಂಬ ಆಸೆ ನಿರಾಸೆಯಾದಂತಾಗಿದೆ. ಬಹಳಷ್ಟು ಪುರಸಭೆಗಳಲ್ಲಿ ಕಮ್ಯೂ

(8ನೇ ಪುಟ ನೋಡಿ)

## ಸಂಪಾದಕೀಯ

### ವಿಜಯನಗರ ಉಕ್ಕು ಕಾರ್ಖಾನೆ ಹಗರಣ

ವಿಜಯನಗರ ಉಕ್ಕು ಕಾರ್ಖಾನೆ ಸದ್ಯಕ್ಕಂತೂ ಸಾಧ್ಯವಿಲ್ಲೆಂದು ಶ್ರೀಮತಿ ಇಂದಿರಾಗಾಂಧಿಯವರು ತಾ। 15 ರಂದು ಬೆಂಗಳೂರಿನ ಲಾಲಬಾಗಿನ ಗಾಜಿನ ಮನೆಯಲ್ಲಿ ಕಾಂಗ್ರೆ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ತೆಗೆದ ಉದ್ಗಾರ ಕರ್ನಾಟಕ ರಾಜ್ಯಾದ್ಯಂತ ಅಷ್ಟೇ ಅಲ್ಲ ದಿಲ್ಲಿಯಲ್ಲಿ ಕೂಡ ಬಿರುಗಾಳಿಯನ್ನೆಬ್ಬಿಸಿದೆ. 1971ರ ಮಧ್ಯಂತರ ಚುನಾವಣೆಯ ಸಂದರ್ಭದಲ್ಲಿ ಕರ್ನಾಟಕ ಜನತೆಯ ಮತ ಗಿಟ್ಟಿಸುವ ದುರುದ್ದೇಶದಿಂದ ಅಡಿಗಲ್ಲು ಹಾಕಿ, ಅನಂತರದ ಹನ್ನೆರಡು ವರ್ಷಗಳಿಂದಲೂ ತಾನೂ ತನ್ನ ಪಕ್ಷದವರೂ "ಮಾಡಿಯೇ ತೀರುತ್ತೇವೆ" ಎಂಬ ಆಶ್ವಾಸನೆಗಳ ಸುರಿಮಳೆ ಸುರಿಯುತ್ತ ಬಂದಿರುವಾಗ ಇಂದಿರಾ ಗಾಂಧಿಯವರ ಈ ನಿಷ್ಠೂರದ ಹೇಳಿಕೆ ಹೋರಾಟದ ಪರಂಪರೆಯಲ್ಲಿ ಹಿಂದೇಟು ಹಾಕದ ಕನ್ನಡ ಜನಕ್ಕಿಂತಲೂ ಹೆಚ್ಚಾಗಿ, ಕಾಂಗ್ರೆ ಮುಖಂಡರೊಳಗೆ ಹೆಚ್ಚಿನ ಗೊಂದಲವನ್ನುಂಟು ಮಾಡಿದೆಂದು ಹೇಳಿದರೆ ತಪ್ಪೇನಲ್ಲ.

ಉಕ್ಕಿನ ಕಾರ್ಖಾನೆಯ ಕುರಿತು ಇಂದಿರಾ ಗಾಂಧಿಯವರಿಂದ ನಕಾರಾತ್ಮಕ ಉತ್ತರ ಬಂದ ಕೂಡಲೇ ಅದೇ ಕ್ಷಣ ಪ್ರತಿಭಟನೆ ವ್ಯಕ್ತ ಮಾಡುವ ಧೈರ್ಯವನ್ನು ಕಾಂಗ್ರೆಸ್ ಶಾಸಕರಾಗಲೀ, ಲೋಕಸಭಾ ಸದಸ್ಯರಾಗಲಿ, ಮತ್ತಾರೇ ಕಾರ್ಯಕರ್ತರಾಗಲೀ ತೋರ್ಪಡಿಸಲಿಲ್ಲ. ಆದರೆ ಕರ್ನಾಟಕದ್ಯಂತ ವಿರೋಧ ಪಕ್ಷಗಳೂ, ಸಾರ್ವಜನಿಕರೂ ಇಂದಿರಾರವರ ಹೇಳಿಕೆ ಖಂಡಿಸಿ ಹೋರಾಟಕ್ಕೆ ಕರೆ ನೀಡಿದಾಗ, ಇಂದಿರಾಗಾಂಧಿಯ ಎದುರಿಗೆ ಬಾಲ ಮುಡಚಿಕೊಂಡು, ಬಾಯಿಗೆ ಬೀಗ ಹಾಕಿಕೊಂಡು ಕೂತಿದ್ದ ಮಹಾ ವೀರ ವೀರಪ್ಪ ಮೊಯಿಲಿ, ಹಾಗೆಯೇ ಕೆ.ಪಿ.ಸಿ.ಸಿ. ಅಧ್ಯಕ್ಷರಾದ ಕೆ. ಎಚ್. ಪಾಟೀಲರು ತಮ್ಮ "ಅಮ್ಮ"ನ ರಕ್ಷಣೆಗಾಗಿ ಪತ್ರಿಕಾ ಪ್ರಕಟಣೆ ಮೂಲಕ ಪತ್ರಿಕೆಗಳತ್ತ ಧಾವಿಸಿರುವುದು ಹಾಸ್ಯಾಸ್ಪದ.

"ವಿಜಯನಗರ ಉಕ್ಕು ಕಾರ್ಖಾನೆಗೆ ಸಂಬಂಧಿಸಿದಂತೆ, ಕೇಂದ್ರ ಸರಕಾರದ ವಿರುದ್ಧ ಚಳುವಳಿ ಮಾರ್ಗ ಕೈಬಿಡಬೇಕು" ಎಂದು ವೀರಪ್ಪ ಮೊಯಿಲಿಯವರು ಜನತಾ ಸರಕಾರ ಮತ್ತು ರಾಜ್ಯದ ಜನತೆಗೆ ಕರೆ ನೀಡಿದ್ದಾರೆ. "ನಮಗೆ ಸಮಗ್ರ ಹಾಗೂ ಪರಿಪೂರ್ಣ ಉಕ್ಕು ಯಂತ್ರಾಗಾರ ಬೇಕಾಗಿದೆ. ಇದಕ್ಕಾಗಿ ಕೇಂದ್ರವು ಸೂಕ್ತ ಹಾಗೂ ವಿಸ್ತೃತ ರೂಪದ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ" ಎಂದು ಮೊಯಿಲಿಯವರು ಹೇಳಿದ್ದಾರೆ.

ಇಂದಿರಾ ಗಾಂಧಿಯವರು ಹದಿಮೂರು ವರ್ಷಗಳ ಹಿಂದೆ ಅಡಿಗಲ್ಲು ಇಡುವಾಗ ಮೊಯಿಲಿಯವರು ಮಂಗಳೂರಿನ ಸಮುದ್ರ ದಂಡೆಯಲ್ಲಿ ಮಕ್ಕಳೊಂದಿಗೆ ಆಟ ಆಡುತ್ತಿದ್ದಂತೆ ಕಂಡು ಬರುತ್ತದೆ. ಆಗ ಇಂದಿರಾ ಗಾಂಧಿಗೆ ಜ್ಞಾನೋದಯವಾದಂತೆ ಕಂಡು ಬರುವುದಿಲ್ಲ. ಈಗ ಮೊಯಿಲಿಯವರಿಗಷ್ಟೇ ಜ್ಞಾನೋದಯವಾಗಿ "ಸಮಗ್ರ" ಪರಿಪೂರ್ಣದ ಮಾತುಗಳನ್ನಾಡುತ್ತಿದ್ದಾರೆ. ಓಟು ಪಡೆಯುವ ಸಲುವಾಗಿಯೇ ಅಮ್ಮಾವ್ರು ಹೊಸಪೇಟೆ, ಚಿಕ್ಕಮಂಗಳೂರುಗಳಂಥ ಕೇಂದ್ರಗಳಲ್ಲಿ ಉಕ್ಕಿನ ಕಾರ್ಖಾನೆ, ಆಸ್ಪತ್ರೆಗಳಿಗೆಲ್ಲ ಕಲ್ಲು ಇಡುತ್ತಲೇ ಹೋಗಿದ್ದಾರೆ; ಅಂಥ ಕಲ್ಲುಗಳ ಮೇಲೆ ಕಟ್ಟಡ ಏರಿಬರಬೇಕೆಂಬ ಪರಿಜ್ಞಾನವನ್ನು ಮಾತ್ರ ಹೊಂದಿಲ್ಲೆಂಬ ಒಳಗುಟ್ಟು ಮೊಯಿಲಿಯವರ ಬಾಲಕಬುದ್ಧಿಗೆ ನಾಟದಿರುವುದಕ್ಕೆ ನಾವ್ಯಾರೂ ಚಿಂತೆ ಪಡಬೇಕಾದ್ದಿಲ್ಲ.

ವಿಶಾಖಪಟ್ಟಣ ಸೇಲಂಗಳಲ್ಲಿ ಉಕ್ಕಿನ ಕಾರ್ಖಾನೆಗಳನ್ನು ಪ್ರಾರಂಭಿಸುವಾಗಲೂ ದೇಶದಲ್ಲಿ ನೆರೆಹಾವಳಿ, ಬರಗಾಲಗಳಂಥ ಭೀಕರ ಸಮಸ್ಯೆಗಳು ಇದ್ದೆ ಇದ್ದವೆಂಬ ಸಂಗತಿ ದೂರದ ಮಂಗಳೂರಿನ ಮೊಯಿಲಿಯವರಿಗೆ ತಿಳಿಯುವುದು ಕಷ್ಟ. ವಿದ್ಯುಚ್ಛಕ್ತಿಯ ಅಭಾವವೂ ವಿಜಯನಗರ ಉಕ್ಕಿನ ಕಾರ್ಖಾನೆಯ ಸಲುವಾಗಿಯೇ ಜನ್ಮತಾಳಿರುವುದಿಲ್ಲ, ಬಂಡವಾಳಶಾಹಿ ಆರ್ಥಿಕ ನೀತಿಯನ್ನನುಸರಿಸುತ್ತಿರುವ ಕಾಂಗ್ರೆಸ್ ಆಳ್ವಿಕೆಯಲ್ಲಿ ಅದು ನಿರಂತರವಾಗಿ ಎದುರಿಸಬೇಕಾಗಿರುವ ಪ್ರಶ್ನೆಯಾಗಿದೆಂಬುದನ್ನು ಕಾಂಗ್ರೆಸ್ಸಿನವರೇ ಆದ ಮೊಯಿಲಿಯವರು ಒಪ್ಪಿಕೊಳ್ಳಲೂ ಸಾಧ್ಯವಿಲ್ಲ.

ರಾಜ್ಯ ಕಾಂಗ್ರೆ ಅಧ್ಯಕ್ಷ ಕೆ. ಎಚ್. ಪಾಟೀಲರೂ, ವೀರಪ್ಪ ಮೊಯಿಲಿಯವರೂ ಹಾಗೆಯೇ ಕೇಂದ್ರದ ಮಂತ್ರಿ ಸಾಠೆಯವರೂ "ಪೂರ್ಣ ಭರವಸೆ" ನೀಡಿದ್ದಾರೆ ಏನೆಂದರೆ ಉಕ್ಕಿನ ಕಾರ್ಖಾನೆಯನ್ನು ಕೈಬಿಡುವುದಿಲ್ಲೆಂದು. ಮುಖ್ಯ ಮಂತ್ರಿ ರಾಮಕೃಷ್ಣ ಹೆಗಡೆಯವರು ಕೇಂದ್ರ ಮಂತ್ರಿಗಳನ್ನು ಭೇಟಿಯಾದಾಗ ಇನ್ನು ಇಪ್ಪತ್ತು ವರ್ಷಗಳಲ್ಲಾದರೂ ಹೊಸಪೇಟೆ ಉಕ್ಕಿನ ಕಾರ್ಖಾನೆಯನ್ನು ಪ್ರಾರಂಭಿಸಿಯೇ ತೀರುತ್ತೇವೆಂಬ ಭರವಸೆಯನ್ನು ಕೊಟ್ಟಿದ್ದಾರಂತೆ.

ರಾಮಕೃಷ್ಣ ಹೆಗಡೆಯವರು ಇಂಥ ಭರವಸೆಗಳ ಮೇಲೆ ವಿಶ್ವಾಸವಿಡುತ್ತಾರೋ ಹೇಗೆಂದು ಕಾದುನೋಡಬೇಕಾಗಿದೆ. ಹನ್ನೆರಡು ವರ್ಷ ಕಾದು ನೋಡಿದ ಕನ್ನಡಿಗರು ಮಾತ್ರ ಪಾಟೀಲ, ಮೊಯಿಲಿಯ

(8ನೇ ಪುಟ ನೋಡಿ)

ಬರಲಿರುವ ಪುರಸಭಾ, ನಗರಸಭಾ ಚುನಾವಣೆಗಳಲ್ಲಿ ಸಿ. ಪಿ. ಐ. (ಎಂ), ಸಿ. ಪಿ. ಐ. ಮತ್ತು ಜನತಾ ಪಕ್ಷದ ಅಭ್ಯರ್ಥಿಗಳನ್ನು ಬೆಂಬಲಿಸಿ

ದಕ್ಷಿಣ ಕನ್ನಡ :

# ಬೀಡಿ ಕಾರ್ಮಿಕರ ಮಹಾಸಭೆಗಳು

## ಬಂಟ್ವಾಳ ತಾಲ್ಲೂಕು

ಬಂಟ್ವಾಳ ತಾಲ್ಲೂಕು ಬೀಡಿ ಕೆಲಸಗಾರರ ಸಂಘದ 7ನೇ ವಾರ್ಷಿಕ ಮಹಾಸಭೆಯು ಬಂಟ್ವಾಳದ ಹನುಮಾನ್ ನಗರದ ಸೀತಾರಾಮ ಸೇವಾ ಮಂದಿರದಲ್ಲಿ ತಾ। 10–7–83 ರಂದು ಸಂಘದ ಅಧ್ಯಕ್ಷ ಡಿ.ಎಚ್. ಬಂಗೇರರ ಅಧ್ಯಕ್ಷತೆಯಲ್ಲಿ ಜರಗಿತು.

ಸಂಘದ ಕಾರ್ಯದರ್ಶಿ ಕಾಮ್ರೇಡ್ ಬಿ. ಸಂಜೀವ ಬಂಗೇರರು ಸ್ವಾಗತಿಸಿ, ಗತ ವರ್ಷದ ಚಟುವಟಿಕೆಗಳ ಮತ್ತು ಲೆಕ್ಕ ಪತ್ರಗಳ ವಾರ್ಷಿಕ ವರದಿಯನ್ನು ಸಭೆಯ ಮುಂದಿಟ್ಟರು. ಬಳಿಕ ಸಭೆಯು ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರಗಳನ್ನು ಅಂಗೀಕರಿಸಿತು.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕೇಂದ್ರ ಸಮಿತಿಯ ಸದಸ್ಯರೂ ತಮಿಳುನಾಡು ಘಟಕದ ಸೆಕ್ರೆಟರಿಯೇಟ್ ಸದಸ್ಯರೂ ಆದ ಕಾಮ್ರೇಡ್ ಎಂ. ಆರ್. ವೆಂಕಟರಾಮನ್ ಮತ್ತು ಇನ್ನಿತರರಿಗೆ ಸಂತಾಪ ಸೂಚಕವಾಗಿ ಮೌನ ಪ್ರಾರ್ಥನೆಯನ್ನು ನಡೆಸಲಾಯಿತು. ಬಿ. ಎಚ್. ಬಂಗೇರರು ಅಧ್ಯಕ್ಷರಾಗಿಯೂ, ಬಿ. ಸೀನ ಬಂಗೇರರು ಉಪಾಧ್ಯಕ್ಷರಾಗಿಯೂ, ಬಿ. ಸಂಜೀವ ಬಂಗೇರರು ಕಾರ್ಯದರ್ಶಿಯಾಗಿಯೂ, ಬಿ. ಗೋಪಾಲ ಗೌಡ ಜತೆ ಕಾರ್ಯದರ್ಶಿಯಾಗಿಯೂ, ಬಿ. ಮಂಜುನಾಥ ಸಪಲ್ಯರು ಕೋಶಾಧಿಕಾರಿಯಾಗಿಯೂ, 5 ಜನ ಪದಾಧಿಕಾರಿಗಳುಳ್ಳ ಒಟ್ಟು 24 ಮಂದಿಯ ಕಾರ್ಯಕಾರಿ ಸಮಿತಿಯನ್ನು 1983–84ನೇ ಸಾಲಿಗೆ ಆರಿಸಲಾಯಿತು.

## ಅಳಪೆ ಪ್ರದೇಶ

ಅಳಪೆ ಪ್ರದೇಶ ಬೀಡಿ ಲೇಬರ್ ಯೂನಿಯನ್ನಿನ ಆಶ್ರಯದಲ್ಲಿ ತಾರೀಖು 3–7–83 ರಂದು ಜಪ್ಪಿನ ಮೊಗರಿನ ಬೀಡಿ ಕಾರ್ಮಿಕರ ಸಭೆಯು ಯೂನಿಯನ್ನಿನ ಅಧ್ಯಕ್ಷರಾದ ಕೆ. ಪಿ. ಸಾಲಿಯನ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರಂಭದಲ್ಲಿ ಜೆ. ಸಂಜೀವ ಅವರು ಸಭಿಕರನ್ನು ಸ್ವಾಗತಿಸಿದರು. ಜೆ. ಜಯಂತಿಯವರು ವರದಿಯನ್ನು ಓದಿದರು. ಯೂನಿಯನ್ನಿನ ಕಾರ್ಯದರ್ಶಿ ಜೆ. ಬಾಲಕೃಷ್ಣಶೆಟ್ಟಿಯವರು ಮಾತನಾಡುತ್ತಾ ಬೀಡಿ ಕಾರ್ಮಿಕ ಹೋರಾಟಗಳನ್ನು ವಿವರಿಸಿ ಹೆಚ್ಚಿನ ಸೌಲಭ್ಯವನ್ನು ಪಡೆಯಲು ಮತ್ತು ತಮಗಾಗುವ ಅನ್ಯಾಯವನ್ನು ಎದುರಿಸಲು ಬಲಿಷ್ಠವಾದ ಬೀಡಿ ಕಾರ್ಮಿಕರ ಸಂಘಟನೆಯನ್ನು ಕಟ್ಟಲು ಕರೆ ನೀಡಿದರು. ಸಭೆಯಲ್ಲಿ ಕೆ. ಪಿ. ಸಾಲಿಯನ್ ಸದಾಶಿವ ಕರ್ಪೆಂಟರ ಬೀಡಿ ಕಾರ್ಮಿಕರ ಸಮಸ್ಯೆಯ ಬಗ್ಗೆ ಮಾತನಾಡಿದರು. ಕೊನೆಯದಾಗಿ 14 ಮಂದಿ ಇರುವ ಗ್ರೂಪು ಸಮಿತಿಯನ್ನು ಆರಿಸಿ ಜೆ. ಸಂಜೀವ ಕಲ್ಲತಡಮೆಯರನ್ನು ಕಾರ್ಯದರ್ಶಿಯಾಗಿ ಆರಿಸಲಾಯಿತು. ಧನ್ಯವಾದದೊಂದಿಗೆ ಸಭೆಯು ಮುಕ್ತಾಯವಾಯಿತು.

## ಉಡುಪಿ :

ಬೀಡಿ ಅಂಡ್ ಟೊಬಾಕೋ ಲೇಬರ್ ಯೂನಿಯನ್ ಉಡುಪಿಯ 19ನೇ ವಾರ್ಷಿಕ ಮಹಾಸಭೆಯು ಶ್ರೀ ಸಿ. ಕಾಳಪ್ಪಶೆಟ್ಟಿಯವರ ಅಧ್ಯಕ್ಷತೆಯಲ್ಲಿ ದೊಡ್ಡಣಗುಡ್ಡೆ ಶಾಲೆಯ ವಠಾರದಲ್ಲಿ ಜರುಗಿತು.

ಪ್ರಾರಂಭದಲ್ಲಿ ಅಗಲಿದ ಮುಂದಾಳುಗಳಾದ ಕಾ॥ ಪ್ರಮೋದ್ ದಾಸ್ ಗುಪ್ತ, ತಮಿಳುನಾಡಿನ ಕಾ॥ ಆರ್. ವೆಂಕಟ್ರಾಮನ್. ಕರ್ನಾಟಕದ ಮಾಜಿ ಶಾಸಕರಾದ ಕಾ॥ ಗಂಗಾಧರನವೋಶಿ, ಕೆ ಜಿ.ಎಫ್.ನ ಕಾ॥ ಆರೋಗ್ಯದಾಸ್ ಅವರ ಸ್ಮರಣೆಗೆ ಮೌನವಾಚರಿಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ಗೂಂಡಾ ಪಡೆಗಳಿಂದ ಮತ್ತು ಪೋಲೀಸರ ದಬ್ಬಾಳಿಕೆಯಿಂದ ಮೃತರಾದ ಎಲ್ಲಾ ಕಾರ್ಮಿಕ ಬಾಂಧವರಿಗೂ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಬೆಲೆ ಏರಿಕೆಯನ್ನು ಸರಕಾರ ತಡೆಗಟ್ಟುವಂತೆ ಕೂಡಲೇ ನ್ಯಾಯ ಬೆಲೆಯಲ್ಲಿ ಜೀವನಾವಶ್ಯಕ ವಸ್ತುಗಳನ್ನು ಒದಗಿಸುವಂತೆ ಸರ್ಕಾರವನ್ನು ಒತ್ತಾಯಿಸುವಂತೆ ನಿರ್ಣಯವನ್ನು ಅಂಗೀಕರಿಸಲಾಯಿತು.

ಪ್ರಾವಿಡೆಂಟ್ ಫಂಡಿನ ಕಛೇರಿಯಲ್ಲಿ ಇರುವ ಅವ್ಯವಸ್ಥೆಗಳನ್ನು ಕೂಡಲೇ ಸರಿಪಡಿಸುವಂತೆಯೂ ನಿರ್ಣಯ ಮಾಡಲಾಯಿತು.

ಸಭೆಯಲ್ಲಿ ಜಿಲ್ಲಾ ಸಿ.ಐ.ಟಿ.ಯು. ಜತೆ ಕಾರ್ಯದರ್ಶಿ ಕೆ. ಶಂಕರ್, ಜಿಲ್ಲಾ ಬೀಡಿ ಫೆಡರೇಶನ್ ಕಾರ್ಯದರ್ಶಿ ಯು. ಬಿ. ಲೋಕಯ್ಯ, ಎಸ್. ಕೆ. ಪ್ರೆಸ್. ವರ್ಕರ್ಸ್ ಯೂನಿಯನ್ ಉಡುಪಿ ವಿಭಾಗದ ಸಹ ಸಂಚಾಲಕ ರಮೇಶ ಮೆಂಡನ್ ಮೊದಲಾದವರು ಸಂಘಟನೆ ಬಲಪಡಿಸಲು ಕರೆ ನೀಡಿದರು.

ಮುಂದಿನ ವರ್ಷದ ಆಡಳಿತ ಸಮಿತಿಗೆ ಅಧ್ಯಕ್ಷರಾಗಿ ಸಿ. ಕಾಳಪ್ಪಶೆಟ್ಟಿ, ಉಪಾಧ್ಯಕ್ಷರುಗಳಾಗಿ ಗೋಪಾಲ ದಾಸಯ್ಯ ಮತ್ತು ಶ್ರೀಮತಿ ಬೇಬಿ ಕಾರ್ಯದರ್ಶಿಯಾಗಿ ಎನ್. ಸಾಧು ಅಮೀನ್, ಜತೆ ಕಾರ್ಯದರ್ಶಿಗಳಾಗಿ ಎಂ. ಗುರುವ, ಎಂ. ಗೋಪಾಲ ಜತ್ತನ್. ಮತ್ತು ಕೋಶಾಧಿಕಾರಿ ಲಕ್ಷಣ ಸೇರಿ ಇತರರನ್ನು ಆರಿಸಲಾಯಿತು.

## ಮಲ್ಪೆ ಪ್ರದೇಶ :

ಮಲ್ಪೆ ಪ್ರದೇಶ ಬೀಡಿ ಕೆಲಸಗಾರರ ಸಂಘದ 3 ನೇ ವಾರ್ಷಿಕ ಮಹಾಸಭೆಯು ತಾ॥ 16–7–83 ರಂದು ಕೊಡವೂರಿನಲ್ಲಿ ಅಂತ ಪೂಜಾರಿಯವರ ಅಧ್ಯಕ್ಷತೆಯಲ್ಲಿ ಸೇರಿತು.

ಪ್ರಾರಂಭದಲ್ಲಿ ಗತಿಸಿದ ಮುಂದಾಳುಗಳಾದ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರಾಗಿದ್ದ ಪ್ರಮೋದ ದಾಸ್ ಗುಪ್ತಾ ಮತ್ತು ತಮಿಳು ನಾಡಿನ ಆರ್. ವೆಂಕಟ್ರಾಮನ್‌ರವರಿಗೆ ಶ್ರದ್ಧಾಂಜಲಿ ಅರ್ಪಿಸಿ ಮೌನ ಆಚರಿಸಲಾಯಿತು. ಕರ್ನಾಟಕದ ಮಾಜಿ ಶಾಸಕರಾದ ಗಂಗಾಧರ ನವೋಶಿ ಮತ್ತು ಆರೋಕ್ಯದಾಸ್ ಅವರ ನೆನಪಿಗೂ ಶ್ರದ್ಧಾಂಜಲಿ ಅರ್ಪಿಸಲಾಯಿತು.

ವಾರ್ಷಿಕ ವರದಿ ಮತ್ತು ಲೆಕ್ಕಪತ್ರ ಮಂಜೂರು ಮಾಡಲಾಯಿತು. ಶ್ರೀಗಳಾದ ಎನ್. ಸಾಧು ಅಮೀನ್ ಪಿ. ವಿಶ್ವನಾಥ ರೈ, ಕೆ. ಶಂಕರ ಯು. ಬಿ. ಲೋಕಯ್ಯ ಡೇವಿಡ್ ಕರ್ಕಡ ಮೊದಲಾದವರು ಮಾತನಾಡಿ ಸಿ. ಐ. ಟಿ. ಯು. ನೇತೃತ್ವದಲ್ಲಿರುವ ಬೀಡಿ ಕಾರ್ಮಿಕರ ಫೆಡರೇಶನು ನಡೆಸಿದ ಹೋರಾಟದಿಂದ ಅಲ್ಲಿ ಕೂಲಿ ಹೆಚ್ಚಳ ಪಡೆಯಲು ಸಾಧ್ಯವಾಯಿತೆಂದು ಇದರ ಪ್ರಯೋಜನ ಪಡೆದು ಸಂಘಟನೆ ಬೆಳಸಿ ವಿಸ್ತರಿಸಲು ಕರೆ ನೀಡಿದರು.

ಮುಂದಿನ ವರ್ಷದ ಆಡಳಿತ ಸಮಿತಿಗೆ ಶ್ರೀಗಳಾದ ಅಂತ ಪೂಜಾರಿ (ಅಧ್ಯಕ್ಷ) ರಾಮ ಸೇರಿಗಾರ, ಶ್ರೀಮತಿ ಜಾನಕಿಶೆಟ್ಟಿ (ಉಪಾಧ್ಯಕ್ಷರು) ದೋಗು ಸುವರ್ಣ (ಕಾರ್ಯದರ್ಶಿ) ನಿರ್ಮಲಾ ಸುಶೀಲಾ (ಜತೆ ಕಾರ್ಯದರ್ಶಿಗಳು) ಉಮೇಶ (ಕೋಶಾಧಿಕಾರಿ) ಅವರುಗಳನ್ನು ಆರಿಸಲಾಯಿತು.

ಬೆಲೆ ಏರಿಕೆಯನ್ನು ವಿರೋಧಿಸಿ ಆಗಸ್ಟ್ 11ರಿಂದ ನಡೆಯುವ ಸತ್ಯಾಗ್ರಹ ಪಿಕೇಟಿಂಗ್ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡಬೇಕೆನ್ನುವ ಮೇ ದಿನದ ರಜೆಯನ್ನು ಸಂಬಳ ಸಹಿತ ರಜೆಯೆಂದು ಸಾರಿ ಬೀಡಿ ಕಾರ್ಮಿಕರಿಗೂ ಸಂಬಳ ಸಹಿತ ರಜೆ ಸಿಗುವಂತಾಗ ಬೇಕೆನ್ನುವ ಮೊದಲಾದ ಠರಾವುಗಳನ್ನು ಅಂಗೀಕರಿಸಲಾಯಿತು.

## ಕೋಟೆಕಾರ್ ಸರ್ಕಲ್

ಕೋಟೆಕಾರ್ ಶರ್ಕಲ್ ಬೀಡಿ ಲೇಬರ್-ಯೂನಿಯನ್ (ಸಿ. ಐ. ಟಿ. ಯು)ನ 10ನೇ ವಾರ್ಷಿಕ ಮಹಾಸಭೆಯು ತಾ 10–7–83ರಂದು ತೊಕ್ಕೊಟ್ಟು ಶ್ರೀ ಕೃಷ್ಣ ಟಾಕೀಸಿನಲ್ಲಿ ಜರುಗಿತು.

ಆರಂಭದಲ್ಲಿ ಕಾ। ಯು. ಬಿ. ಮಾರಪ್ಪನವರು ಸಭಿಕರನ್ನು ಸ್ವಾಗತಿಸಿದರು. ಕಾ। ಕೆ. ನಾರಾಯಣ ಶೆಟ್ಟಿಯವರು ಅಧ್ಯಕ್ಷತೆ ವಹಿಸುತ್ತಾ, ಇತ್ತೀಚೆಗೆ ಅಗಲಿದ ನಾಯಕರಾದ ರಶ್ಯಾದ ಪ್ರಧಾನಿ ಬ್ರೆಜ್ನೇವ್,ಸಿ. ಪಿ. ಐ. ಎಂ ಪಾಲಿಟ್ ಬ್ಯೂರೋ ಸದಸ್ಯ ಕಾ। ಪ್ರಮೋದ್ ದಾಸ್ ಗುಪ್ತಾ ತಮಿಳು ನಾಡಿನ ಕಾರ್ಮಿಕ ನಾಯಕ ಆರ್. ವೆಂಕಟರಾಮನ್. ಕರ್ನಾಟಕದ ಮಾಜಿ ಎಂ. ಎಲ್. ಎ. ಕಾ। ಗಂಗಾಧರ ನವೋಶಿ ಕೆ. ಜಿ. ಎಫ್. ಕಾರ್ಮಿಕ ನಾಯಕರಾದ ಕಾ। ಆರೋಗ್ಯದಾಸ್ ಹಾಗೂ ಇತರ ಸಂಗಾತಿಗಳಿಗೆ ಸಭೆಯು ಸಂತಾಪ ಸೂಚಿಸಿ ಒಂದು ನಿಮಿಷ ಮೌನವನ್ನಾಚರಿಸಿತು. ಗತ ಕಾಲದಲ್ಲಿ ಸಂಘವು ನಡೆಸಿದ ಚಟುವಟಿಕೆಗಳ ವರದಿಯನ್ನು ಕಾ। ಸುಕುಮಾರರವರು ಸಭೆಯ ಮುಂದಿಟ್ಟರು ಮತ್ತು ಕಾ। ಮಂಜಪ್ಪನವರು 1982ರ ಸಂಘದ ಆದಾಯ ಮತ್ತು ಖರ್ಚಿನ ಲೆಕ್ಕ ಪತ್ರವನ್ನು ಸಭೆಯಮುಂದಿಟ್ಟರು ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಮುಖ್ಯ ಅತಿಥಿಯಾಗಿಭಾಗವಹಿಸಿದ ಅಳಪೆ ಪ್ರದೇಶ ಬೀಡಿ ಲೇಬರ್ ಯೂನಿಯನ್‌ನ ಕಾರ್ಯದರ್ಶಿ ಕಾ॥ ಜೆ. ಬಾಲಕೃಷ್ಣ ಶೆಟ್ಟಿಯವರು ಮಾತನಾಡುತ್ತಾ ಬೀಡಿ ಮಜೂರರ ಸಂಘಟನೆಯ ಆವಶ್ಯಕತೆಯನ್ನು ಹೇಳಿದರು. ಮತ್ತು ಕಾ॥ ಆನಂದ ಉಳ್ಳಾಲ ಅವರು ಜಗತ್ತಿನಲ್ಲಿ ಸಾಮ್ರಾಜ್ಯಶಾಹಿಗಳು ಯುದ್ಧ ಭೀತಿಯನ್ನು ಹುಟ್ಟಿಸುತ್ತಾ ಹೆಚ್ಚಾಗಿ ಮಾರಕಾಸ್ತ್ರಗಳನ್ನು ತಯಾರಿಸಿ ಯುದ್ಧವನ್ನು ಪ್ರಚೋದನೆ ಮಾಡುತ್ತಿರುವುದನ್ನು ವಿವರಿಸಿದರು.

ದ. ಕ. ಜಿಲ್ಲಾ ಬೀಡಿ ಫೆಡರೇಶನಿನ ಕಾರ್ಯದರ್ಶಿಯವರಾದ ಕಾ। ಯು. ಬಿ. ಲೋಕಯ್ಯರವರು ಮಾತನಾಡುತ್ತಾ ಸರಕಾರವು ಏರುತ್ತಿರುವ ಬೆಲೆಯನ್ನು ತಡೆಗಟ್ಟಲು ಸೂಕ್ತ ಕ್ರಮ ವಹಿಸದಿದ್ದರೆ ರಾಜ್ಯಾದ್ಯಂತ ನಡೆಯುವ ಬೆಲೆ ಏರಿಕೆಯ ವಿರುದ್ಧ ಚಳವಳದಲ್ಲಿ ಬೀಡಿ ಮಜೂರರು ಸಕ್ರೀಯವಾಗಿ ಭಾಗವಹಿಸಬೇಕು. ಮತ್ತು ಬೀಡಿ ಮಜೂರರ ಸಂಘಟನೆಯನ್ನು ಬಲಪಡಿಸಬೇಕು ಹಾಗೂ ವಿಸ್ತರಿಸಬೇಕೆಂದರು. 4ನೇ ಅಖಿಲ ಭಾರತ ಸಿ. ಐ. ಟಿ. ಯು ಸಮ್ಮೇಳನದ ಮುಖ್ಯ ತೀರ್ಮಾನಗಳಾದ ಯುದ್ಧ ವಿರೋಧಿ ಚಳವಳಿ ಮತ್ತು ಸಂಘಟಿತ ಐಕ್ಯ ಹೋರಾಟದ ಕಡೆಗೆ ಸಭಿಕರ ಗಮನ ಸೆಳೆದರು.

ಮುಂದಿನ ವರ್ಷಕ್ಕೆ ಕಾಮ್ರೇಡ್‌ಗಳಾದ ಕೆ. ನಾರಾಯಣ ಶೆಟ್ಟಿ ಅಧ್ಯಕ್ಷರಾಗಿ ಯು. ಬಿ. ಮಾರಪ್ಪ, ಕೆ. ಈಶ್ವರ ಉಪಾಧ್ಯಕ್ಷರಾಗಿಯೂ, ಯು. ಬಿ. ಲೋಕಯ್ಯ ಕಾರ್ಯದರ್ಶಿ ಹಾಗೂ ಕೆ. ಮಂಜಪ್ಪ, ಪಿ. ಬಾಬು, ಬಿ. ಉಮಾನಾಥ್ ಜೊತೆಕಾರ್ಯದರ್ಶಿಗಳಾಗಿಯೂ ಮತ್ತು ಸುಕುಮಾರರವರು ಕೋಶಾಧಿಕಾರಿಯಾಗಿರುವ ಒಟ್ಟು 23 ಜನರು ಕಾರ್ಯಕಾರಿ ಸಮಿತಿಯನ್ನು ಸರ್ವಾನುಮತದಿಂದ ಆರಿಸಲಾಯಿತು.

ಕೊನೆಯಲ್ಲಿ ಕಾ। ಯು. ಬಿ. ಮಾರಪ್ಪನವರು ಧನ್ಯವಾದವಿತ್ತರು

## ಆಂಧ್ರ ಎನ್ ಜಿ ಓ ಮುಷ್ಕರಕ್ಕೆ ಸಿಐಟಿಯು ಬೆಂಬಲ

ಆಂಧ್ರ ಪ್ರದೇಶದ ರಾಜ್ಯ ಸರ್ಕಾರಿ ನೌಕರರ ಮುಷ್ಕರವು ಒಂದು ವಾರದಿಂದ ಯಶಸ್ವಿಯಾಗಿ ನಡೆಯುತ್ತಿದೆ.

ಸಿ. ಐ. ಟಿ.-ಯು. ಕರ್ನಾಟಕ ರಾಜ್ಯ ಸಮಿತಿಯು ಈ ಮುಷ್ಕರವನ್ನು ಬೆಂಬಲಿಸುತ್ತದೆ ಮತ್ತು ಆಂಧ್ರ ಪ್ರದೇಶ ಸರ್ಕಾರವು ಮುಷ್ಕರವನ್ನು ಸೋಲಿಸಲು ತೆಗೆದುಕೊಳ್ಳುವ ಯಾವುದೇ ಕ್ರಮವನ್ನು ವಿರೋಧಿಸುತ್ತದೆ.

ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಫೆಡರೇಷ್ನನ ಪ್ರಧಾನ ಕಾರ್ಯದರ್ಶಿ ಕುಂ. ಸುಕೊಮಲ ಸೇನ್‌ರವರ ಸೂಚನೆಗಳನ್ನು ಬೆಂಬಲಿಸಿ ರಾಜ್ಯ ಸಮಿತಿಯು ಸಂಧಾನದ ಮೂಲಕ ಒಂದು ಒಪ್ಪಂದಕ್ಕೆ ಬರಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ.

# ಬೆಲೆ ಏರಿಕೆ ವಿರುದ್ಧ ಹೋರಾಟಕ್ಕೆ ಬೀಡಿ ಕಾರ್ಮಿಕರ ಬೆಂಬಲ

ಮಂಗಳೂರು ಬೀಡಿ ಕೆಲಸಗಾರರ ಸಂಘ (ಸಿ.ಐ.ಟಿ.ಯು.)ದ 19ನೇ ವಾರ್ಷಿಕ ಮಹಾಸಭೆಯು ತಾ. 17-7-83 ರಂದು ಸಂಘದ ಅಧ್ಯಕ್ಷರಾದ ಕಾ. ಜೆ. ವೀರಪ್ಪನವರ ಅಧ್ಯಕ್ಷತೆಯಲ್ಲಿ ಬೋಳಾರದಲ್ಲಿರುವ ಎಸ್. ಕೆ. ಟೈಲ್ ವರ್ಕರ್ಸ್ ಯೂನಿಯನ್‌ನ ಆಫೀಸಿನಲ್ಲಿ ಜರಗಿತು.

ಮಹಾಸಭೆಗೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ದ. ಕ. ಜಿಲ್ಲಾ ರೈತ ಸಂಘದ ಕಾರ್ಯದರ್ಶಿ /ಕಾ. ಜನಾರ್ಧನ ನಾಯಕ್, ಸಿ.ಐ.ಟಿ.ಯು ದ. ಕ. ಜಿಲ್ಲಾ ಕಾರ್ಯದರ್ಶಿ ಕಾಂ. ಕೆ. ಮುಸಬ್ಬ ಕಶ್ಯೂನೆಟ್ ಎಂಡ್ ಅಲೈಡ್ ವರ್ಕರ್ಸ್ ಯೂನಿಯನ್ ಕಾರ್ಯದರ್ಶಿ ಕಾ. ಕಮಲಾಕ್ಷಬಂಗೇರ ಮೊದಲಾದವರು ಮಾತನಾಡಿ ಶುಭ ಕೋರಿದರು. ದ/ಕ. ಜಿಲ್ಲಾ ಬೀಡಿ ವರ್ಕರ್ಸ್ ಫೆಡರೇಶನ್‌ನ ಪ್ರಧಾನ ಕಾರ್ಯದರ್ಶಿ ಕಾ. ಯು. ಬಿ. ಲೋಕಯ್ಯನವರು ಮಾತನಾಡಿ ಬೀಡಿ ಕಾರ್ಮಿಕರು ಇನ್ನೂ ಬಲಿಷ್ಟವಾಗಿ ಸಂಘಟಿತರಾಗಿ ಹೋರಾಟ ನಡೆಸಬೇಕಾದ ಅಗತ್ಯವನ್ನು ವಿವರಿಸಿದರು.

ಬೆಲೆ ಏರಿಕೆಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ ಮಹಾಸಭೆಯು ಈ ಬಗ್ಗೆ ಆಗಸ್ಟ್ 11ರಂದು ನಡೆಯಲಿರುವ ಕಾರ್ಮಿಕರ ಪಿಕೆಟಿಂಗ್ ಕಾರ್ಯಕ್ರಮಕ್ಕೆ ಬೆಂಬಲ ನೀಡಿ ಈ ಚಳವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸುವಂತೆ ಬೀಡಿ ಕಾರ್ಮಿಕರರಿಗೆ ಕರೆ ನೀಡಿತು.

ಮುಂದಿನ ವರ್ಷಕ್ಕೆ ಈ ಕೆಳಗಿನ ಪದಾಧಿಕಾರಿಗಳನ್ನು ಆರಿಸಲಾಯಿತು:

ಲೋಕಯ್ಯ ಶೆಟ್ಟಿ, (ಅಧ್ಯಕ್ಷ) ನಾರಾಯಣರಾವ್, ಜೆ. ಬಾಲಕೃಷ್ಣ, ಬಾಬು ಶೆಟ್ಟಿ, (ಉಪಾಧ್ಯಕ್ಷರುಗಳು) ಜೆ. ವೀರಪ್ಪ (ಪ್ರಧಾನ ಕಾರ್ಯದರ್ಶಿ) ಕೊರಗಪ್ಪ ರೈ, ಕೃಷ್ಣ ಶೆಟ್ಟಿ, ರಾಜೇಂದ್ರ (ಜತೆ ಕಾರ್ಯದರ್ಶಿಗಳು) ಕಮಲಾಕ್ಷ ಬಂಗೇರ (ಕೋಶಾಧಿಕಾರಿ) ಹಾಗೂ 31 ಮಂದಿ ಸದಸ್ಯರಿಂದ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು.

ಪ್ರಾರಂಭದಲ್ಲಿ ಕೆ. ಲೋಕಯ್ಯಶೆಟ್ಟಿ ಸ್ವಾಗತಿಸಿ ಕೊನೆಗೆ ಜೆ. ವೀರಪ್ಪನವರು ವಂದಿಸಿದರು.

ಪಂಚಾಯತಿ ರಾಜ್ಯ ಲೇಖನ ಮಾಲೆ-1

# ಇ. ಎಂ. ಎಸ್. ರವರ ದೃಷ್ಟಿಯಲ್ಲಿ ಪಂಚಾಯಿತಿ ರಾಜ್ಯದ ಪ್ರಶ್ನೆ

[ನಮ್ಮ ರಾಜ್ಯದಲ್ಲಿ ಇತ್ತೀಚೆಗೆ ಅಧಿಕಾರ ವಹಿಸಿಕೊಂಡ ಜನತಾ ರಂಗದ ಸರ್ಕಾರ ಜಿಲ್ಲಾ ಪರಿಷತ್ ಮಸೂದೆಯನ್ನು ರಚಿಸಿ ಸಾರ್ವಜನಿಕರ ಚರ್ಚೆಗೆ ಬಿಡುಗಡೆ ಮಾಡಿದೆ. ವಿಧಾನಸಭೆಯ ಮುಂಬರುವ ಅಧಿವೇಶನದಲ್ಲಿ ಈ ಮಸೂದೆಯನ್ನು ಮಂಡಿಸಲಿದೆ. ಈ ಸಂದರ್ಭದಲ್ಲಿ ಪಂಚಾಯತ್ ರಾಜ್ಯ ವ್ಯವಸ್ಥೆಯ ಬಗ್ಗೆ ಮತ್ತು ನಮ್ಮ ಮುಂದಿರುವ ಮಸೂದೆಯ ಬಗ್ಗೆ ವ್ಯಾಪಕವಾಗಿ ಚರ್ಚೆ ನಡೆಯಬೇಕಾಗಿದೆ. ಈ ಉದ್ದೇಶದ ಲೇಖನ ಮಾಲೆಯ ಮೊದಲನೆಯ ಕಂತು ಈ ಲೇಖನ.

ಕಾ॥ ಇ. ಎಂ. ಎಸ್‌ರವರು ಪಂಚಾಯಿತಿ ರಾಜ್ಯ ಪ್ರಶ್ನೆಯನ್ನು ಸಂವಿಧಾನ, ಕೇಂದ್ರ ಸರ್ಕಾರ ನೋಡುವ ರೀತಿ ಮತ್ತು ಇತರ ಪ್ರಶ್ನೆಗಳ ಮಾರ್ಕ್ಸ್‌ವಾದೀ ವಿಶ್ಲೇಷಣೆಯನ್ನು ಈ ಮೂಲೆಯ ಮೊದಲ ಲೇಖನವಾಗಿ ಕೊಡಲಾಗಿದೆ.

1977ರಲ್ಲಿ ಕೇಂದ್ರದಲ್ಲಿ ಆಡಳಿತಕ್ಕೆ ಬಂದ ಅಂದಿನ ಜನತಾ ಸರ್ಕಾರ ರಚಿಸಿದ್ದ ಅಶೋಕ್ ಮೆಹ್ತಾ ಸಮಿತಿಯ ಸದಸ್ಯರಾಗಿ ಅವರು ಮಂಡಿಸಿದ ಭಿನ್ನಮತದ ವರದಿಯಿಂದ ಈ ಭಾಗಗಳನ್ನು ಆಯ್ದು ಕೊಳ್ಳಲಾಗಿದೆ]

## ನಮ್ಮ ದೃಷ್ಟಿ

[illegible] ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವ ಆಡಳಿತವೆಂಬುದು ಒಂದು ನಿರ್ಜೀವ [illegible] ಆಧಾರಗಳೆಂಬಂತೆ ಕೇಂದ್ರ, ರಾಜ್ಯ, ಜಿಲ್ಲೆ ಮತ್ತು ಪಂಚಾಯಿತಿ [illegible] ಪ್ರತಿಸ್ಥಾಪಿಸುವುದೇ ನಮ್ಮ ದೇಶದ ಆಡಳಿತ ವಿಕೇಂದ್ರೀಕರಣದ ಅರ್ಥ [illegible]. ಇನ್ನಾವುದೇ ಬೇರೆ ರೀತಿಯಲ್ಲಿ ಪಂಚಾಯತ್ ರಾಜ್ಯ ವ್ಯವಸ್ಥೆಯ ಬಗ್ಗೆ ಯೋಚಿಸಲಾರೆ. ಕೇಂದ್ರ-ರಾಜ್ಯ ಸಂಬಂಧಗಳ ಪ್ರಶ್ನೆಯಿಂದ ಬೇರ್ಪಡಿಸಿ ನೋಡಲಾರೆ. ಈ ಪ್ರಶ್ನೆಯನ್ನು ಸಮಗ್ರವಾಗಿ ನೋಡದ ಹೊರತು, ಸಂವಿಧಾನಕ್ಕೆ ಮೂಲಭೂತ ತಿದ್ದುಪಡಿಗಳನ್ನು ಮಾಡದ ಹೊರತು, ಅಶೋಕ್ ಮೆಹ್ತಾ ಸಮಿತಿಯ ವರದಿಯೂ ಕೂಡ, ಬಲವಂತರಾಯ್ ಮೆಹ್ತಾ ವರದಿಯಂತೆ ಮಾತ್ರ ನೇಕ ಶಿಫಾರಸುಗಳಂತೆ ಕಾಗದದ ಮೇಲೆಯೇ ಉಳಿಯುತ್ತದೆ. ಆದುದರಿಂದ ಪ್ರಜಾಪ್ರಭುತ್ವದ ಮೂಲ ಪರಿಕಲ್ಪನೆಯಲ್ಲಿಯೇ ತೀವ್ರ ಬದಲಾವಣೆಯನ್ನು ತರಬೇಕಾಗಿದೆ. ಚತುಸ್ತಂಭ ಪ್ರಜಾಪ್ರಭುತ್ವದ ಕಲ್ಪನೆಯನ್ನು ಅಳವಡಿಸಬೇಕಾಗಿದೆ.

## ಸಂವಿಧಾನದ ವಿಫಲತೆ

ಸಂವಿಧಾನದಲ್ಲಿ ಪ್ರಭುತ್ವ ನೀತಿಯ ನಿರ್ದೇಶಕ ತತ್ವಗಳನ್ನು ನೋಡುವಾಗ ಪಂಚಾಯತಿಗಳನ್ನು ರಚಿಸುವುದರ ಬಗ್ಗೆ ಕಾಲ್ಪನಿಕ [illegible] ಮಂತ್ರಿ [illegible] ಕೇಂದ್ರ ಸರ್ಕಾರದ ಅನೇಕ ದಾಖಲೆಗಳಲ್ಲಿ [illegible] ಯೋಜನೆಗಳನ್ನು [illegible] ತರುವುದರಲ್ಲಿ ಪಂಚಾಯತ್‌ಗಳ ಪ್ರಾಮುಖ್ಯತೆಯ ಬಗ್ಗೆ ಒತ್ತಿ ಹೇಳಿದೆ ಎಂಬುದು ಕೂಡ ನಿಜ. ಆದಕ್ಕಾಗಿಯೇ ಬಲವಂತರಾಯ್ ಮೆಹ್ತಾ ಸಮಿತಿ ನೇಮಿತವಾದದ್ದು. ಆ ವರದಿಯ ಮೇಲೆ ಮತ್ತು ಆ ಶಿಫಾರಸುಗಳನ್ನು ಅಳವಡಿಸಲು ನಡೆದ ಪ್ರಯತ್ನಗಳ ಅನುಭವದ ಮೇಲೆ ಅಶೋಕ್ ಮೆಹ್ತಾ ಸಮಿತಿಯ ವರದಿ ಆಧಾರಿತವಾಗಿದೆ. [illegible] ಈ ಸಮಿತಿಯ ಕರಡು ವರದಿ [illegible] ರಾಜ್ಯ ಗ್ರಾಮೀಣ ಅಭಿವೃದ್ಧಿ [illegible] ಕಲ್ಪನೆಯ [illegible] ಈ ಕಲ್ಪನೆ ಆಡಳಿತ ವ್ಯವಸ್ಥೆಯ ಅಭಿವೃದ್ಧಿ ಕಾರ್ಯಕ್ರಮಗಳ ಅಧಿಕಾರವನ್ನು ಗರಿಷ್ಠವಾಗಿ ವಿಕೇಂದ್ರೀಕರಿಸುವ ಯೋಚನೆ ಮಾಡುವಾಗಲೇ ಸಿಯಂತ್ರಣ [illegible] ಕಾರ್ಯದ ವಿಕೇಂದ್ರೀಕರಣ ಮಾಡುವುದಿಲ್ಲ ಎಂಬುದನ್ನು ಸೂಚಿಸುತ್ತದೆ.

ನಾವು [illegible] ಸಂವಿಧಾನವು [illegible] ವ್ಯವಸ್ಥೆಯನ್ನು ಕೇಂದ್ರ ಹಾಗೂ ರಾಜ್ಯಗಳಲ್ಲದೆ ಮಾತ್ರವಲ್ಲದೆ ಜಿಲ್ಲಾ ಮತ್ತು ಕೆಳಮಟ್ಟಗಳಲ್ಲಿ ಕೂಡ ಪ್ರಜೆಗಳು [illegible] ಸಂವಿಧಾನಿಕ [illegible] ವಿಫಲವಾಗಿದೆ. ಕೇಂದ್ರ ಮತ್ತು ರಾಜ್ಯ ಮಟ್ಟಗಳಲ್ಲಿ ಪ್ರಜಾಪ್ರಭುತ್ವ ಮತ್ತು ಕೆಳಮಟ್ಟಗಳಲ್ಲಿ ಅಧಿಕಾರಶಾಹಿ ಇದೇ ಸಂವಿಧಾನಿಕ [illegible] ಭಾರತದ ರಾಜ್ಯ ವ್ಯವಸ್ಥೆಯ [illegible] ಸಾಲದೆನ್ನುವಂತೆ ಈ ಸಂವಿಧಾನವನ್ನು ಕಾರ್ಯಾಚರಣೆಗೆ ತರುವಲ್ಲಿ ರಾಜ್ಯಗಳ ಅಧಿಕಾರ ಮತ್ತು ಹಕ್ಕುಗಳ ಮೇಲೆ ಅತಿಕ್ರಮಣ, 42 ನೇ ಸಂವಿಧಾನ ತಿದ್ದುಪಡಿಯಲ್ಲಿ [illegible] ಮುಟ್ಟಿದೆ [illegible].

ಈ ರೀತಿಯ ಕೇಂದ್ರೀಕೃತ ಆಡಳಿತ ವ್ಯವಸ್ಥೆಯ ಆಧಾರದ ಮೇಲೆಯೇ ಸಂವಿಧಾನ ಮತ್ತು ಬಲವಂತರಾಯ್ ಮೆಹತಾ ವರದಿ ಪಂಚಾಯತ್‌ಗಳನ್ನು ನಿರ್ಮಿಸಬಯಸಿತ್ತು, ಆದುದರಿಂದ ರಾಜ್ಯಮಟ್ಟದಲ್ಲಿರುವ ಅಧಿಕಾರಶಾಹಿಯಾಗಲೀ, ರಾಜಕಾರಣಿಗಳಾಗಲಿ ಸಂವಿಧಾನದತ್ತವಾದ ಅಧಿಕಾರಗಳನ್ನು ವಿಕೇಂದ್ರೀಕರಣಗೊಳಿಸಲು ಒಪ್ಪದೇ ಹೋದದ್ದು; ಅಶೋಕ ಮೆಹ್ತಾರವರ ದಿ [illegible] ಕೂಡ ಜಿಲ್ಲಾ ಮತ್ತು ಪಂಚಾಯತ್ ಮಟ್ಟಗಳಿಗೆ ಅಧಿಕಾರ ವಿಕೇಂದ್ರೀಕರಣವನ್ನು [illegible] ಶಿಫಾರಸ್ಸು ಮಾಡಿಲ್ಲ.

## ರಾಜಕೀಯ ದೃಢ ಸಂಕಲ್ಪದ ಅಭಾವ

ಕೇಂದ್ರ ಸರ್ಕಾರದಲ್ಲಿದ್ದುವರೆಗೂ ಇದ್ದ [illegible] ಇಂದಿನ (ಆಗಿನ ಜನತಾ) ಸರಕಾರಗಳೆರಡರಲ್ಲಿಯೂ ಇರುವ ದೃಢ ರಾಜಕೀಯ ಸಂಕಲ್ಪದ ಅಭಾವ ಇದಕ್ಕೊಂದು ಪ್ರಮುಖ ಅಡ್ಡಿ.

35 ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ ರಾಜ್ಯಗಳ ಸಂವಿಧಾನಾತ್ಮಕ ಅಧಿಕಾರದ ಮೇಲೆ ಎಸಗಲ್ಪಟ್ಟಿರುವ ಅತಿಕ್ರಮಣಗಳು ಹೆಚ್ಚುತ್ತಲೇ ಇವೆ. ಆದುದರಿಂದ ಸ್ವಾಭಾವಿಕವಾಗಿ ಕೇಂದ್ರದಲ್ಲಿ ಜನತಾ ಸರಕಾರ ಬಂದಾಗ ಕೇಂದ್ರ-ರಾಜ್ಯಗಳ ಸಂಬಂಧವನ್ನು ಪುನರ್ವಿಮರ್ಶಿಸುವುದೆಂದು ನಿರೀಕ್ಷಿಸಲಾಗಿತ್ತು. ಅನೇಕ ಜನ ಮುಖ್ಯಮಂತ್ರಿಗಳು (ಜನತಾ ಪಕ್ಷದವರೂ ಕೂಡ) ಇದಕ್ಕೆ ಸಹಮತರಾಗಿದ್ದರು. ಆದರೆ ಜನತಾ ಪ್ರಧಾನಿ ಕೂಡ ಸಂವಿಧಾನದಲ್ಲಿ ಯಾವುದೇ ಬದಲಾವಣೆಗೆ ಒಪ್ಪಲಿಲ್ಲ; ಅಲ್ಲದೆ ಒಂದು ರಾಷ್ಟ್ರೀಯ ಚರ್ಚೆ ನಡೆಯುವುದು ಕೂಡ ಅವರಿಗೆ ಬೇಡವಾಯಿತು.

## ವಿಕೇಂದ್ರೀಕರಣ ಏಕೆ ?

ಇನ್ನು ಅಶೋಕ ಮೆಹ್ತಾರವರ ವರದಿಯಲ್ಲಿ - ದುರ್ಬಲ ವರ್ಗಗಳ ಪ್ರಸ್ತಾಪ [illegible] ಅಭಿವೃದ್ಧಿಯ ಸಲುವಾಗಿ ವಿಕೇಂದ್ರೀಕರಣದ ಆವಶ್ಯಕತೆ ಇದೆ. ಆದರೆ ಈ ಬಗ್ಗೆ ನಮ್ಮ ದೃಷ್ಟಿಕೋನ ಸ್ಪಷ್ಟವಾಗಿದೆ. ದುರ್ಬಲ ವರ್ಗಗಳೆಂದರೆ ಯಾರು ? ಎಂಬುದನ್ನು ತಿಳಿಯದೆ

ಸಂಗ್ರಹಾನುವಾದ :
**ಜೈ. ಎಸ್. ನಾಗರಾಜ್**

ದುರ್ಬಲ ವರ್ಗಗಳ ಕಲ್ಯಾಣ ಸಾಧ್ಯವಾಗುವುದಿಲ್ಲ. ಜಹಗೀರುದಾರಿ ಪಾಳೆಯಗಾರಿಕೆ ಮತ್ತು ಬಂಡವಾಳಶಾಹಿ ಇವೆರಡೂ ರೀತಿಯ ಶೋಷಣೆಯು ಹೊರೆ ಈ ದುರ್ಬಲ ವರ್ಗಗಳನ್ನು ಸೃಷ್ಟಿಸಿದೆ. ಈ ದುರ್ಬಲ ವರ್ಗಗಳ ಎರಡು ಬಗೆಯ ಜನರನ್ನು ಒಳಗೊಂಡಿದೆ.

ಮೊದಲನೆಯದಾಗಿ ಬಂಡವಾಳಶಾಹೀ ಬೆಳವಣಿಗೆಯ ಹಾದಿಯಲ್ಲಿ ಅನೇಕ ದಶಕಗಳನ್ನು ಕಳೆದನಂತರವೂ ಕೂಡ ಹಿಂದಿನ ಶೋಷಣೆಗಳು ಮುಂದುವರಿಯುತ್ತಲೇ ಇವೆ. ಬಂಡವಾಳಶಾಹೀ ಪೂರ್ವ ಸಮಾಜದ ಭೂಮಾಲಿಕ, ಲೇವಾದೇವಿ ಸಾಲದ ಸಾಹುಕಾರರು, ಜಾತಿಗಳು ಮತ್ತಿತರ ಶೋಷಣೆಗಳು ಮುಂದುವರಿದೇ ಇವೆ. ಹರಿಜನರು, ಗಿರಿಜನರು, ನಾನಾ ಹಿಂದುಳಿದ ಜಾತಿಗಳವರು ಈ ಗುಂಪಿಗೆ ಸೇರಿದವರು. ಶತಮಾನಗಳಿಂದ ಜಾತಿ ಪದ್ಧತಿಯ ತುಳಿತಕ್ಕೆ ಮತ್ತು ಶೋಷಣೆಗೆ ಒಳಗಾಗಿದ್ದ 'ಕೆಳಜಾತಿಯ' ಜನರ ಒಂದು ವಿಭಾಗ ಬಂಡವಾಳಶಾಹಿ ಬೆಳವಣಿಗೆಯ ಅನಿವಾರ್ಯ ಪರಿಣಾಮವಾಗಿ ನಿರುದ್ಯೋಗಕ್ಕೆ ತುತ್ತಾದರು, ಭೂಹೀನರಾದರು. ಇನ್ನುಳಿದ ಬಂಡವಾಳಶಾಹಿ ಸಮಾಜದ ತುಳಿತಕ್ಕೆ ಒಳಗಾದರು.

ಎರಡನೆಯದಾಗಿ ಬಂಡವಾಳಶಾಹೀ ಸಮಾಜದ ಶೋಷಣೆಗೊಳಗಾದವರು. ಬಂಡವಾಳಶಾಹೀ ಪೂರ್ವದಲ್ಲಿ ಪುರಾಣಕಾಲದ ತುಳಿತ ಮತ್ತು ಶೋಷಣಾ ವಿಧಾನಗಳಿಂದಲೇ ಇನ್ನೂ ನರಳುತ್ತಿರುವ ಹಾಗೂ ಬಂಡವಾಳಶಾಹೀ ಸಮಾಜದ ಹೊಸ ವಿಧಾನಗಳ ಶೋಷಣೆಗೆ ಕೂಡ ತುತ್ತಾಗಿರುವ ಮಹಿಳಾ ವಿಭಾಗ ಕೂಡ ಎರಡನೇ ಗುಂಪಿಗೆ ಸೇರುತ್ತದೆ. ಇದರಿಂದ ನಮ್ಮ ಸಮಾಜದ ಶೇ. 50 ಭಾಗ ಎರಡೂ ರೀತಿಯ ಶೋಷಣೆಗೆ ಒಳಗಾಗಿ 'ದುರ್ಬಲ ವರ್ಗ' ದವರಾಗಿದ್ದಾರೆ ಎಂದು ಹೇಳಬಹುದು.

ದುರ್ಬಲ ವರ್ಗದವರ ಸಹಾಯಕ್ಕೆಂದು ಉದ್ದೇಶಿಸಲಾದ ಎಲ್ಲ ಯೋಜನೆಗಳು ಪ್ರಸ್ತಾಪಗಳು ಹೆಚ್ಚೆಂದರೆ ಕೇವಲ ಮನಸ್ಸಮಾಧಾನಕ್ಕಾಗಿ ಅಷ್ಟೇ. ಎಲ್ಲಿಯವರೆಗೆ ಊಳಿಗಮಾನ್ಯ ಪದ್ಧತಿಯ ಹಾಗೇ ಬಂಡವಾಳಶಾಹೀ ಶೋಷಣೆಯಿಂದ ಪೂರ್ಣವಾಗಿ ನಮ್ಮ ಸಮಾಜದ ಎಲ್ಲ ಜನರನ್ನು ಬಿಡುಗಡೆ ಮಾಡುವುದಿಲ್ಲವೋ ಅಲ್ಲಿವರೆಗೂ ಉಳಿದೆಲ್ಲ ಯೋಜನೆಗಳು ಕೇವಲ ಕಣ್ಣೊರೆಸಾಟ.

ದುರ್ಬಲ ವರ್ಗಗಳು ಈ ಶೋಷಣೆಯಿಂದ ಬಿಡುಗಡೆ ಹೊಂದಬೇಕಾದರೆ ಬೇರೆಯವರ ಕೃಪೆಗಾಗಿ ಆಶ್ರಯಿಸುವುದರ ಬದಲು ತಾವೇ ತಮ್ಮದೇ ಸಂಘಟನೆಗಳಿಂದ ಮತ್ತು ರಾಜಕೀಯ ಪಕ್ಷಗಳಿಂದ ಬಿಡುಗಡೆಯ ಹಾದಿಯನ್ನೇ ಹುಡುಕಿಕೊಳ್ಳಬೇಕು.

## ಸಂಘಟಿತ ಹೋರಾಟವನ್ನು ಬೆಳೆಸುವುದಕ್ಕಾಗಿ

ಕೇಂದ್ರೀಕೃತ ರೀತಿಯ ಪ್ರಜಾಪ್ರಭುತ್ವ ಸಂಘಟನೆ ಮತ್ತು ಹೋರಾಟಗಳಿಲ್ಲದೆ ದುರ್ಬಲ ವರ್ಗಗಳಿಗೂ ಎಂದು ಹೇಳಲಾದ ಯೋಜನೆಗಳೆಲ್ಲ ಅವರನ್ನು ಶೋಷಿಸಗೊಳಿಸುವ ತಂತ್ರಗಳಷ್ಟೇ. ಈ ದೃಷ್ಟಿಯಿಂದ ಮಾತ್ರ ಶೋಷಣೆಯ ವ್ಯೂಹವನ್ನು ಕೊನೆಗೊಳಿಸುವ ಸಂಘಟಿತ ಹೋರಾಟಗಳನ್ನು ನಡೆಸುವುದಕ್ಕಾಗಿ ಮಾತ್ರ ನಾವು ಪ್ರಜಾಪ್ರಭುತ್ವ ರಕ್ಷಣೆಯಲ್ಲಿ ಮತ್ತು ಕೆಳಮಟ್ಟಗಳಿಗೆ ವಿಸ್ತರಿಸುವಲ್ಲಿ ಆಸಕ್ತರಾಗಿದ್ದೇವೆ. [illegible] ಹಕ್ಕುಗಳು ವಿಶ್ವಾದ್ಯಂತ ಕಾರ್ಮಿಕ ವರ್ಗ ನಡೆಸಿದ ಹೋರಾಟದ ಫಲ. ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ನಮ್ಮ ಅನುಭವದ ಈ ವ್ಯವಸ್ಥೆ ಶೋಷಕ ವರ್ಗದ ವಿರುದ್ಧದ ಹೋರಾಟದಲ್ಲಿ ಶೋಷಿತರ ಕೈಯಲ್ಲಿ ಒಂದು ಪ್ರಬಲ ಆಯುಧ ಎಂದು ಸಾಬೀತು ತೋರಿಸಿದೆ. ಶೋಷಿತ ವರ್ಗ ಆಡಳಿತದ ಹತ್ತಿರ ಎಲ್ಲಿಯಾದರೂ ಸುಳಿಯಲು ಪ್ರಯತ್ನಿಸಿದರೂ ಸಾಕು, ಪ್ರಜಾತಂತ್ರ ಯಂತ್ರ ಕೇವಲ ದಬ್ಬಾಳಿಕೆ ವ್ಯವಸ್ಥೆಯನ್ನಾಗಿ ಪರಿವರ್ತಿಸುತ್ತಾರೆ. ಆದುದರಿಂದ ಭಾರತೀಯ ಸಂವಿಧಾನ ಜಾರಿಯಾಗುವುದಕ್ಕೂ ಮುನ್ನ [illegible] ರಾಜ್ಯಗಳಲ್ಲಿನ ಪ್ರಜಾಪ್ರಭುತ್ವವನ್ನು ಸಂರಕ್ಷಿಸುವುದು ಮತ್ತು ಜಿಲ್ಲೆ ಮತ್ತು ಕೆಳಗಿನ ಹಂತಗಳಿಗೂ ವಿಸ್ತರಿಸುವುದು ಅತಿ ಪ್ರಮುಖವಾದ ಕ್ರಮ.

×××××××××××××

## ವಿವಾಹ

ಕರ್ನಾಟಕ ಪ್ರಾಂತ್ಯ [illegible] ರಾಜ್ಯ [illegible] ಪೂರ್ಣಾವಧಿ ಕಾರ್ಯಕರ್ತ ರಾಗಿ ಆದಂತ ಕಾ॥ ಬಿ. ಲಿಂಗಪ್ಪ [illegible] ವಿವಾಹವು [illegible] ದಿನಾಂಕ : [illegible] 1983 ರಂದು [illegible] ಮಾಡುವ [illegible] ನಡೆಯಿತು. ಅಂದಿನ ಸರಳ ವಿವಾಹ ಸಮಾರಂಭಕ್ಕೆ [illegible] ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿಯವರಾದ [illegible] ಸಿ. ಎಸ್. [illegible] ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಮುಖ್ಯ ಭಾಷಣಕಾರರಾಗಿ D.Y.F.I. ನ ಕಾ॥ ಗಂಗಾಧರ [illegible] ಮಾತನಾಡಿದರು. ಅಂದಿನ ಸಮಾರಂಭದಲ್ಲಿ ಊರಿನ ಪ್ರಮುಖರು ಭಾಗವಹಿಸಿದ್ದರು.

×××××××××××××

[illegible]

# ಬಲ ಕಮ್ಯುನಿಸ್ಟರ ಸುಳ್ಳು ಆರೋಪಕ್ಕೆ ಉತ್ತರ :

( ಕಳೆದ ಸಂಚಿಕೆಯಿಂದ )

### ತುರ್ತು ಪರಿಸ್ಥಿತಿಗೆ ಬೆಂಬಲ

ಕಾಂಗ್ರೆಸ್‌ನಲ್ಲಿ 1969 ರಲ್ಲುಂಟಾದ ಒಡಕಿನ ನಂತರ ಭಾರತೀಯ ಕಮ್ಯುನಿಸ್ಟ್ ಪಕ್ಷದ ನೀತಿಯಲ್ಲಿ ಮತ್ತೊಂದು ತಿರುವುಂಟಾಯಿತು. ಅದರ ಪ್ರಕಾರ ಸಿಂಡಿಕೇಟ್ ಬಿಟ್ಟಮೇಲೆ, ಉಳಿದ ಕಾಂಗ್ರೆಸ್ ಒಂದು ಪ್ರಗತಿಪರ ಶಕ್ತಿ ಎಂದು ಪರಿಗಣಿಸಲಾಯಿತು. ಕೇರಳದಲ್ಲಿ ಮಾರ್ಕ್ಸ್‌ವಾದೀ ನಾಯಕತ್ವದ ಐಕ್ಯರಂಗವನ್ನು ಇಂದಿರಾ ಕಾಂಗ್ರೆಸ್ ಬೆಂಬಲದೊಡನೆ ಮಾರ್ಕ್ಸ್‌ವಾದೀ ವಿರೋಧದ ಐಕ್ಯರಂಗವನ್ನಾಗಿ ಪರಿವರ್ತಿಸಲಾಯಿತು. ಇಲ್ಲಿಂದ ಮತ್ತೊಂದು ವರ್ಗಸಾಹಚರ್ಯದ ನೀತಿ ಆರಂಭವಾಯಿತು. ಅತಿ ಕ್ರೂರವಾದ ತುರ್ತುಪರಿಸ್ಥಿತಿಯನ್ನು ಬೆಂಬಲಿಸುವುದರಲ್ಲಿ ಗರಿಷ್ಟ ಮಟ್ಟಕ್ಕೆ ಹೋಯಿತು. ಬಾಟಿಂಡಾ ಸಮ್ಮೇಳನದಲ್ಲಿ ಈ ಧೋರಣೆಯನ್ನು ವಿಮರ್ಶಿಸಲಾಯಿತು ಮತ್ತು ಇಂದಿರಾ ಕಾಂಗ್ರೆಸ್‌ನ ಸಂಬಂಧದ ನೀತಿಯನ್ನು ಬದಲಾಯಿಸಿಕೊಳ್ಳಲಾಯಿತು. ಈ ಪ್ರಕ್ರಿಯೆಯಲ್ಲಿ ಸಿ.ಪಿ.ಐ.ನ ಸಿ.ಪಿ.ಎಂ. ವಿರೋಧಿ ನೀತಿ ಕೂಡ ಬದಲಾವಣೆಗೊಳಗಾಗಬೇಕಾಯಿತು.

ಇಂದ್ರದೀಪ್ ಸನ್ಹಾರವರು ಚೀನಾದ ಕಮ್ಯುನಿಸ್ಟ್ ಪಕ್ಷದ ಮೇಲೆ ಪಕ್ಷದ ವಿಭಜನೆಯ ಆರೋಪ ಹೊರಿಸುವ ಮೊದಲು ಸ್ವಲ್ಪ ಯೋಚಿಸಬೇಕು. ಈ ವಿಭಜನೆ, ಒಂದಾಗಿದ್ದ ಕಮ್ಯುನಿಸ್ಟ್ ಪಕ್ಷದ ಒಳಗಡೆ ನಡೆಯುತ್ತಿದ್ದ ವರ್ಗ ಸಹಕಾರ ಮತ್ತು ವರ್ಗ ಹೋರಾಟದ ನೀತಿಯ ನಡುವಣ ಹೋರಾಟದ ತಾತ್ವಿಕ ಬೆಳವಣಿಗೆಯಲ್ಲವೇ ಎಂಬುದರ ಬಗ್ಗೆ ಅವರು ಆಲೋಚಿಸಬೇಕು. ಅವರು ವಿಭಜನೆಯ ನಂತರದ ಸಾಧನೆಗಳ ಪರಿಗಣನೆಗೂ ಗಮನ ನೀಡಬೇಕು. ಸಿ. ಪಿ. ಐ. ಪಾಲಿಸುತ್ತಾ ಬಂದ ವರ್ಗ ಸಹಕಾರದ ನೀತಿ ಜನಸಮೂಹದಲ್ಲಿ ಅವರಿಗಿದ್ದ ಬೆಂಬಲದ ಕುಸಿತಕ್ಕೆ ಕಾರಣವಾಯಿತು. ಅವರಿಗೆ ಅಂತರರಾಷ್ಟ್ರೀಯ ಬೆಂಬಲ ದೊರೆತರೂ ಅದನ್ನು ನಿಲ್ಲಿಸಲಾಗಲಿಲ್ಲ. ಅದೇ ಸಮಯದಲ್ಲಿ ಬಂಡವಾಳಶಾಹಿ ಭೂಮಾಲಕ ಸರ್ಕಾರದಲ್ಲಿ ದಬ್ಬಾಳಿಕೆಯನ್ನೆದುರಿಸಿದರೂ ಕೂಡ, ಹೊರ ದೇಶಗಳ ಕಮ್ಯುನಿಸ್ಟ್ ಪಕ್ಷಗಳು ತೊಂದರೆ ಉಂಟುಮಾಡಿದರೂ ಕೂಡ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದಲ್ಲಿ ಗಣನೀಯ ಬೆಳವಣಿಗೆಯಾಯಿತು.

ಸಿನ್ಹಾರವರು ಈಗಾಗಲೇ ನಾವು ಅನೇಕ ಬಾರಿ ನಿರಾಕರಿಸಿರುವ, ಸಮರ್ಥವಾಗಿ ಉತ್ತರಿಸಿರುವ ಚೀನಾದ ಕೈವಾಡವೆಂಬ ಆರೋಪಕ್ಕೆ ಮತ್ತೊಮ್ಮೆ ಕೈ ಹಾಕಬಾರದಾಗಿತ್ತು.

### ಶ್ರಮಿಕರ ಅಂತರ ರಾಷ್ಟ್ರೀಯತೆ

ತಮ್ಮ ಲೇಖನದಲ್ಲಿ ಬಹಳವಾಗಿ ಬರೆದಿರುವ ಮತ್ತೊಂದು ವಿಷಯವೆಂದರೆ ಶ್ರಮಿಕರ ಅಂತರ ರಾಷ್ಟ್ರೀಯತೆ. ಸಿ.ಪಿ.ಎಂ. ಅಂತರ ರಾಷ್ಟ್ರೀಯತೆಯ ತತ್ವಗಳಿಗೆ ಬದ್ಧವಾಗಿ, ದೃಢವಾಗಿ ನಿಂತಿದ್ದಾಗ, ಸಿ. ಪಿ. ಐ. ರಾಷ್ಟ್ರೀಯ ಸೌಹಾರ್ದತೆಗೆ ಬಲಿ ಬಿದ್ದದ್ದನ್ನು ಅವರು ನಿರಾಕರಿಸಲು ಸಾಧ್ಯವೇ? ಸಿ.ಪಿ.ಐ.ನ ಈಗಿನ ನಾಯಕರು 1968ರ ಹಂಗೇರಿ ಕ್ರಾಂತಿಯ ಸಮಯದಲ್ಲಿ ಮತ್ತು 1962ರ ಇಂಡಿಯಾ-ಚೀನಾ ಯುದ್ಧದ ಸಮಯದಲ್ಲಿ ಏನೇನು ಮಾಡಿದರು ಮತ್ತು ಏನನ್ನೆಲ್ಲ ಹೇಳಿದರು ಎಂಬುದರ ವಿವರಗಳಿಗೆ ನಾನು ಈಗ ಹೋಗುವುದಿಲ್ಲ. ಆದರೆ 1965ರ ಇಂಡಿಯಾ-ಪಾಕಿಸ್ತಾನ ಯುದ್ಧದ ಸಮಯದಲ್ಲಿನ ಅವರ ನಿಲುವಿನ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ನಮ್ಮ ಪಕ್ಷ ಯುದ್ಧವನ್ನು ಕೊನೆಗಾಣಿಸಬೇಕೆಂದು, ಎಲ್ಲ ವಿವಾದಗಳನ್ನು ಸಂಧಾನದ ಮೂಲಕ ಬಗೆಹರಿಸಬೇಕೆಂಬ ಬೇಡಿಕೆಯನ್ನಿಟ್ಟಿತ್ತು. ರಶ್ಯಾ ದೇಶದಿಂದ ತಾಷ್ಕೆಂಟ್ ಮಾತುಕತೆಗಳ ಪ್ರಸ್ತಾಪ ಬಂದಾಗ ತಕ್ಷಣವೇ ನಾವದನ್ನು ಸ್ವಾಗತಿಸಿದೆವು. ಇದೂ ಕೂಡ ನೆನಪಿನಲ್ಲಿರಲಿ. ಕೇಂದ್ರ ಸಮಿತಿಯಿಂದ ಹಿಡಿದು ಜಿಲ್ಲಾ ಸಮಿತಿಯ ವರೆಗೆ ಇಡೀ ನಾಯಕತ್ವ ಬಂಧಿತರಾಗಿದ್ದ ಅತಿ ಕಷ್ಟಕರ ಪರಿಸ್ಥಿತಿಯಲ್ಲಿ ಕೂಡ ನಾವು ಈ ಧೋರಣೆಯ ನಿಲುವಿನ ಪ್ರಚಾರ ಮಾಡಿದೆವು.

ಆಗ ಸಿ. ಪಿ. ಐ. ನ ನಿಲುವು ಏನಾಗಿತ್ತು? ಆ ಬಗ್ಗೆ ಅವರದೇ ಆದ ಸ್ವಯಂ ಟೀಕೆಯೇ ಉತ್ತರ ಹೇಳಲಿ. "ಮೊಟ್ಟ ಮೊದಲಾಗಿ ನಾವು ಪಾಕಿಸ್ತಾನ ಮತ್ತು ಪೂರ್ವ ಪಾಕಿಸ್ತಾನಗಳಲ್ಲಿರುವ ಸುಧಾರಿತ ಶಕ್ತಿಗಳಿಗೆ ಕರೆ ಕೊಡುವುದರ ಬಗ್ಗೆ ಗಮನವನ್ನೇ ಕೊಡಲಿಲ್ಲ. ನಮ್ಮ ಚಳವಳಿ ಲೋಪಯುಕ್ತವಾಗಿತ್ತು. ಯುದ್ಧವನ್ನು ಕೊನೆಗೊಳಿಸುವುದಕ್ಕೆ ಶಾಂತಿಯುತ ವಿಧಾನಗಳ ಕಡೆಗೆ ಗಮನ ಕೊಡಲಿಲ್ಲ. ಜನಸಂಘ ಮತ್ತಿತರ ಅತಿರೇಕ ವಾದಿಗಳು ಹೇಳುತ್ತಿದ್ದುದಕ್ಕೂ, ನಾವು ಹೇಳಿದ್ದಕ್ಕೂ, ನಿರ್ದಿಷ್ಟವಾದ ಸ್ಪಷ್ಟವಾದ ಅಂತರ ಇರಬೇಕಾಗಿತ್ತು."

ಮುಂದೆ ತಾಷ್ಕೆಂಟ್ ಮಾತುಕತೆಗಳಲ್ಲಿ ಪರ್ಯವಸಾನವಾದ ಸೋವಿಯತ್ ದೇಶದ ಕರೆ ಮತ್ತು ಶಾಂತಿ ಪ್ರಯತ್ನಗಳನ್ನು ಉದಾಸೀನ ಮಾಡಿದ್ದು ನಮ್ಮ ದೌರ್ಬಲ್ಯವನ್ನು ತೋರಿಸುತ್ತದೆ. ಸೋವಿಯತ್ ದೇಶ ಈ ಯುದ್ಧದ ಸಂದರ್ಭದಲ್ಲಿ ಮಾಡಿದ ಕೆಲವು ಹೇಳಿಕೆಗಳನ್ನು ನಾವು ಮೊದಮೊದಲು ಟೀಕಿಸಿದೆವು." ಈ ಹೇಳಿಕೆಗಳೆಲ್ಲಾ ಏನು ತೋರಿಸುತ್ತವೆ? ರಾಷ್ಟ್ರೀಯ ಭಾವಾಂಧತೆಗೆ ಸಿ. ಪಿ. ಐ. ಬಲಿಯಾಯಿತು ಮತ್ತು ಸೋವಿಯತ್ ಒಕ್ಕೂಟದಂತಹ ದೇಶದ ಶಾಂತಿ ಪ್ರಯತ್ನಗಳಿಗೂ ಸರಿಯಾಗಿ ಪ್ರತಿಕ್ರಿಯೆ ವ್ಯಕ್ತಮಾಡಲಿಲ್ಲ ಎಂದಲ್ಲವೇ?

ಮತ್ತೊಂದು ಪ್ರಶ್ನೆಗೆ ಬರೋಣ. 1968ರಲ್ಲಿ ಜೆಕೋಸ್ಲೋವಾಕಿಯದಲ್ಲಿ ತಲೆಯೆತ್ತುತ್ತಿದ್ದ ಪ್ರತಿ ಕ್ರಾಂತಿಯ ವಿಷಯ. ಸಾಮ್ರಾಜ್ಯಶಾಹಿಗಳ ಪ್ರತಿಕ್ರಾಂತಿಕಾರಿ ಪ್ರಯತ್ನಗಳ ವಿರುದ್ಧ ಸಮಾಜವಾದೀ ದೇಶವೊಂದರ, ಇದೇ ಸಮಾಜವಾದೀ ದೇಶಗಳ ರಕ್ಷಣೆ ಇಲ್ಲಿಯ ಮುಖ್ಯ ಪ್ರಶ್ನೆ. ಸೋವಿಯತ್ ಒಕ್ಕೂಟದೊಡನೆ ತೀವ್ರ ಭಿನ್ನಾಭಿಪ್ರಾಯಗಳಿದ್ದರೂ ಕೂಡ ಮಾರ್ಕ್ಸ್‌ವಾದಿ ಪಕ್ಷ ಸಮಾಜವಾದದ ರಕ್ಷಣೆಗಾಗಿ ಆ ದೇಶ ಜೆಕೋಸ್ಲೋವಾಕಿಯಾದಲ್ಲಿ ಮಧ್ಯ ಪ್ರವೇಶ ಮಾಡಿದ್ದನ್ನು ಬೆಂಬಲಿಸಲು ಕ್ಷಣ ಮಾತ್ರವೂ ಹಿಂದೆಮುಂದೆ ನೋಡಲಿಲ್ಲ. ನಾವದನ್ನು ನಮ್ಮ ಶ್ರಮಿಕ ಅಂತರ ರಾಷ್ಟ್ರೀಯ ಕರ್ತವ್ಯವೆಂದು ತಿಳಿದೆವು. ಆದರೆ ಸಿ. ಪಿ. ಐ. ಏನು ಮಾಡಿತು? ಸುಮಾರು ಆರು ತಿಂಗಳುಗಳ ಕಾಲ ಯಾವುದೇ ತೀರ್ಮಾನ ತೆಗೆದುಕೊಳ್ಳದೆ ಪಾರ್ಶ್ವವಾಯು ಬಡಿದಂತೆ ಸುಮ್ಮನಿತ್ತು.

## 'ನ್ಯೂ ಏಜ್' ಪತ್ರಿಕೆಯ

### ಮಾರ್ಕ್ಸ್‌ವಾದ – ಲೆನಿನ್‌ವಾದಗಳ ಸಂರಕ್ಷಣೆ

1976ರಲ್ಲಿ ಯುರೋಪಿನ ಕಮ್ಯುನಿಸ್ಟ್ ಪಕ್ಷಗಳ ಸಮ್ಮೇಳನ ಬರ್ಲಿನ್‌ನಲ್ಲಿ ಸೇರಿದಾಗ, ಅಂತರ ರಾಷ್ಟ್ರೀಯ ಕಮ್ಯುನಿಸ್ಟ್ ಚಳವಳಿಯಲ್ಲಿ ಮಾರ್ಕ್ಸ್‌ವಾದ ಲೆನಿನ್‌ವಾದದ ಮೂಲ ತತ್ವಗಳನ್ನೇ ನಿರಾಕರಿಸುವ ಪರಿಷ್ಕರಣವಾದಿ ಬೆಳವಣಿಗೆಯ ಬಗ್ಗೆ ನಮ್ಮ ಪಕ್ಷ ಅಸಮಾಧಾನ ವ್ಯಕ್ತಮಾಡಿತ್ತು. ಪಾಲಿಟ್ ಬ್ಯೂರೋ ಈ ಸಮ್ಮೇಳನದ ವಿಷಯದಲ್ಲಿ ಮಾರ್ಕ್ಸ್‌ವಾದಿ-ಲೆನಿನ್‌ವಾದೀ ತತ್ವಗಳಿಗೆ ತಾನು ಬದ್ಧವಾಗಿದೆಯೆಂದು ನಿರ್ಣಯ ಮಾಡಿ ತನ್ನ ಎಲ್ಲಾ ಸದಸ್ಯರಿಗೆ ಈ ಬಗ್ಗೆ ಶಿಕ್ಷಣ ನೀಡಿತು.

**"ತನ್ನ ದೇಶದ ಪರಿಸ್ಥಿತಿಯನ್ನು ಅಳೆದು, ತನ್ನ ರಾಜಕೀಯದ ಮತ್ತು ಹೋರಾಟ ತಂತ್ರದ ಧೋರಣೆಯನ್ನು ರೂಪಿಸಿಕೊಳ್ಳುವುದು ಪ್ರತಿ ಕಮ್ಯೂನಿಸ್ಟ್ ಪಕ್ಷದ ಹಕ್ಕು ಮತ್ತು ಕರ್ತವ್ಯ"** ಎಂದು ಈ ನಿರ್ಣಯ ಮತ್ತೆ ಘೋಷಿಸಿತು.

ಕಮ್ಯೂನಿಸ್ಟ್ ಪಕ್ಷಗಳು ಪ್ರತಿ ದೇಶದ, ಬದಲಾಗುತ್ತಿರುವ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ ನೀತಿ ನಿರೂಪಿಸಲು ಸ್ವತಂತ್ರವಾಗಿವೆ. ಆದರೆ ತಮ್ಮೆಲ್ಲರ ಶತ್ರುವಾದ ಸಾಮ್ರಾಜ್ಯಶಾಹಿ ಮತ್ತು ಬಂಡವಾಳದ ವಿರುದ್ಧದ ಹೋರಾಟದಲ್ಲಿ ಮೂಲ ತತ್ವಗಳನ್ನು ಬಿಟ್ಟುಕೊಡುವುದಿಲ್ಲ, ಈ ಏಕೋದ್ದೇಶದ ಹೋರಾಟದಲ್ಲಿ ಪರಸ್ಪರ ಸಹಾಯ ಮಾಡುತ್ತವೆ. ಅನೇಕ ಸಮಾಜವಾದೀ ದೇಶಗಳು ಉದಯಿಸಿದಾಗ ಮತ್ತು ಒಂದು ಸಮಾಜವಾದೀ ವ್ಯೂಹವೇ ನಿರ್ಮಾಣವಾದ ಈ ಪರಿಸ್ಥಿತಿಯಲ್ಲಿ ಬೇರೆ ದೇಶಗಳ ಕಮ್ಯೂನಿಸ್ಟ್ ಪಕ್ಷಗಳು ಸಮಾಜವಾದೀ ದೇಶಗಳ ರಕ್ಷಣೆಗೆ ಮುಂದಾಗಬೇಕೆನ್ನುವುದು ಅವುಗಳ ಶ್ರಮಿಕ ಅಂತರ ರಾಷ್ಟ್ರೀಯ ಕರ್ತವ್ಯವಾಗಿರುತ್ತದೆ. ಸಮಾಜವಾದಿ ರಾಷ್ಟ್ರಗಳ ನಾಯಕರು ಅನೇಕ ಎಡ ಮತ್ತು ಬಲ ಸಮಯ ಸಾಧಕ ತಪ್ಪುಗಳನ್ನು ಮಾಡುತ್ತಿದ್ದರೂ ಕೂಡ ಈ ಕರ್ತವ್ಯವನ್ನು ಮಾಡಬೇಕಾಗಿದೆ. ಅದೇ ರೀತಿ ಸಮಾಜವಾದೀ ದೇಶಗಳನ್ನಾಳುತ್ತಿರುವ ಕಮ್ಯೂನಿಸ್ಟ್ ಪಕ್ಷಗಳು ಸಮಾಜವಾದಿಯಲ್ಲದ ದೇಶಗಳ ಕಾರ್ಮಿಕ ವರ್ಗ ತಮ್ಮ ಶೋಷಕರ, ದಮನಕಾರರ ವಿರುದ್ಧ ಹೋರಾಡುವುದಕ್ಕೆ ಸಹಾಯಕವಾಗುವ ನೀತಿಯನ್ನು ರೂಪಿಸಿಕೊಳ್ಳಬೇಕಾದುದು ಅವುಗಳ ಕರ್ತವ್ಯವಾಗಿರುತ್ತದೆ. ತಮ್ಮ ತಕ್ಷಣದ ವಿದೇಶ ನೀತಿಯ ಸಂಕುಚಿತ ಅಗತ್ಯಗಳಿಗಾಗಿ, ತಮ್ಮ ಮಿತ್ರ ದೇಶಗಳ ವರ್ಗ ಹೋರಾಟವನ್ನು ಗೌಣ ಮಾಡುವ ನೀತಿಯನ್ನು ಅನುಸರಿಸುವುದೂ ಕೂಡ ಬಹಳ ತಪ್ಪು. ಈ ನೀತಿಯನ್ನನುಸರಿಸಲು ನಿರಾಕರಿಸುವ ಯಾವುದೇ ಪಕ್ಷ ಶ್ರಮಿಕ ಅಂತರ ರಾಷ್ಟ್ರೀಯತೆಯಿಂದ ದೂರ ಹೋದಂತೆ. ಈ ನಡುವಳಿಕೆ, ಜಾಗತಿಕ ಕ್ರಾಂತಿಕಾರಿ ಚಳವಳಿಗೆ ಮತ್ತು ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟಕ್ಕೆ ವಿಪರೀತ ಹಾನಿಕರ.

ಪ್ರತಿ ಕಮ್ಯೂನಿಸ್ಟ್ ಪಕ್ಷವೂ ಸಾಮಾಜಿಕಬದಲಾವಣೆಯನ್ನು ಶಾಂತಿಯುತ ವಿಧಾನಗಳ ಮೂಲಕ ತರಲು ಪ್ರಯತ್ನಿಸಬೇಕು.

ಆದರೆ ಇದು ಕಮ್ಯೂನಿಸ್ಟ್ ಪಕ್ಷದ ಇಚ್ಛೆಯ ಮೇಲೆ, ಪ್ರಯತ್ನದ ಮೇಲೆ ನಿಂತಿಲ್ಲ. ಆಳುವ ವರ್ಗಗಳ ನಡವಳಿಕೆಯ ಮೇಲೆ ಆಧರಿಸಿದೆ. ಇತಿಹಾಸ ನಮಗೆ ಕಲಿಸಿದೆ. ಜನ ಸಮೂಹದಲ್ಲಿ ಅಲ್ಪಸಂಖ್ಯಾತರಾದ ಶೋಷಕ ಆಳುವ ವರ್ಗಗಳು ಬಹುಮತವನ್ನು ಮನ್ನಿಸುವುದಿಲ್ಲ ಮತ್ತು ಭಯಾನಕ ಕೃತ್ಯಗಳಿಂದ ಮತ್ತು ಹಿಂಸೆಯಿಂದ ಅದನ್ನು ಅಡಗಿಸುತ್ತಾರೆ. ಅವರ ಆಡಳಿತಕ್ಕೆ ಶೋಷಿತ ಜನಸಮೂಹದಿಂದ ಕುತ್ತೊದಗಿದಾಗ, ಬೂರ್ಜ್ವಾ ಪ್ರಜಾಸತ್ತೆಯನ್ನು ಕಿತ್ತೊಗೆದು ಸರ್ವಾಧಿಕಾರಕ್ಕೆ ಮತ್ತು ಭಯಾನಕ ಆಡಳಿತಕ್ಕೆ ಕೈ ಹಾಕಲು ಹಿಂದೆ ಮುಂದೆ ನೋಡುವುದಿಲ್ಲ.

ಶ್ರಮಿಕರ ಸರ್ವಾಧಿಕಾರವನ್ನು ಬಂಡವಾಳಶಾಹಿಗಳು ಮತ್ತು ಅವರ ಸಿದ್ಧಾಂತಕಾರರು ಬಹುಸಂಖ್ಯಾತರ ವಿರುದ್ಧ ಅಲ್ಪಸಂಖ್ಯಾತರ ದಬ್ಬಾಳಿಕೆಯೆಂದು, ಸಾಮಾನ್ಯ ಜನತೆಗೆ ಪ್ರಜಾಪ್ರಭುತ್ವವನ್ನು ನಿರಾಕರಿಸಿದಂತೆ ಎಂದು ಬಹುರೀತಿಯಲ್ಲಿ ಚಿತ್ರಿಸುತ್ತಿದ್ದಾರೆ. ಇವೆಲ್ಲ ಪ್ರಯತ್ನಗಳ ವಿರುದ್ಧ ಶ್ರಮಿಕ ಸರ್ವಾಧಿಕಾರದ ವೈಜ್ಞಾನಿಕ ಸಿದ್ಧಾಂತವನ್ನು ಸಮರ್ಥಿಸಿಕೊಳ್ಳುವುದು ಮತ್ತು ಅದನ್ನು ಎತ್ತಿ ಹಿಡಿಯುವುದು ಎಲ್ಲ ಕಮ್ಯೂನಿಸ್ಟರ ಆದ್ಯ ಕರ್ತವ್ಯವಾಗಿದೆ ಎಂದು ಸಿ. ಪಿ. ಐ. (ಎಂ.) ಪರಿಗಣಿಸುತ್ತದೆ.

ಮಾರ್ಕ್ಸ್‌ವಾದ ಮತ್ತು ಲೆನಿನ್‌ವಾದವು ಸಾಮಾಜಿಕ ಕ್ರಾಂತಿಯ ವಿಜ್ಞಾನ-ತತ್ವ ಮತ್ತು ತಂತ್ರಗಳೆರಡೂ ಹೌದು. ಮಾರ್ಕ್ಸ್‌ವಾದವೆಂಬುದು ಅಂಧತತ್ವವಲ್ಲ. ವಿಶ್ವದ ಬಲಗಳ ಶಕ್ತಿ ಸಮೀಕರಣವನ್ನು ಮತ್ತು ತಮ್ಮ ದೇಶದ ವಿವಿಧ ಶಕ್ತಿಗಳ ಬಲವನ್ನು ಮತ್ತು ನಿರ್ದಿಷ್ಟ ವಿಶೇಷ ಸಂಗತಿಗಳನ್ನು ತಮ್ಮ ದೇಶಗಳ ಕ್ರಾಂತಿಕಾರಿ ಹೋರಾಟಗಳಿಗೆ ಮಾರ್ಕ್ಸ್‌ವಾದ-ಲೆನಿನ್‌ವಾದ ಅನ್ವಯಿಸುವಾಗ ಪರಿಗಣಿಸಬೇಕೆಂದು ಬಯಸುತ್ತದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಈ ಸರ್ವ ವಿಜೇತ ಶ್ರಮಿಕ ಲೋಕದೃಷ್ಟಿಯನ್ನು ಮತ್ತು ಸಾಮಾಜಿಕ ಕ್ರಾಂತಿಯ ವಿಜ್ಞಾನವನ್ನು ಎಡ ಮತ್ತು ಬಲ ಸಂದರ್ಭಸಾಧಕತನಗಳಿಂದ ಸಂರಕ್ಷಿಸಬೇಕೆಂದು ಬಯಸುತ್ತದೆ.

ಎಲ್ಲ ಕಮ್ಯೂನಿಸ್ಟ್ ಪಕ್ಷಗಳು ಸಮಾನವೆಂದು ಮತ್ತು ಸರ್ವತಂತ್ರ ಸ್ವತಂತ್ರವೆಂದು ಭಾವಿಸಿ ನಡೆದಿದೆ. ಸಮಾಜವಾದಿ ಕ್ರಾಂತಿಗಳನ್ನು ಪೂರೈಸಿದ ಪಕ್ಷಗಳ ಮತ್ತು ಇತರ ಸೋದರ ಪಕ್ಷಗಳ ಅನುಭವದಿಂದ ಪಾಠ ಕಲಿಯಬೇಕೆಂದು ಭಾವಿಸುತ್ತದೆ. ಆದರೆ ದೇಶದೊಳಗಿನ ಪರಿಸ್ಥಿತಿಯನ್ನು ಮಾರ್ಕ್ಸ್‌ವಾದಿ-ಲೆನಿನ್‌ವಾದೀ ದೃಷ್ಟಿಕೋನದಿಂದ ಅಳೆದು ತನ್ನ ನೀತಿಯನ್ನು ಧೋರಣೆಯನ್ನು ರೂಪಿಸಿಕೊಳ್ಳುತ್ತದೆ. ಯಾವುದೇ ಪಕ್ಷ ತನ್ನನ್ನು ನಿರ್ದೇಶಿಸಲು ಅವಕಾಶ ಕೊಟ್ಟಿಲ್ಲ.

ಮಾರ್ಕ್ಸ್‌ವಾದಿ ಪಕ್ಷದ ಪಾಲಿಟ್ ಬ್ಯೂರೋ ವಿಶ್ವ ಕಮ್ಯುನಿಸ್ಟ್ ಚಳುವಳಿಯಲ್ಲಿಯ ಭಿನ್ನತೆಗಳ ಬಗ್ಗೆ, ತೀವ್ರವಾಗಿ ಚಿಂತೆಗೊಳಗಾಗಿದೆ. ಇದನ್ನು ಸಾಮ್ರಾಜ್ಯಶಾಹಿಗಳು ಬಳಸಿಕೊಳ್ಳುತ್ತಿರುವುದರ ಬಗ್ಗೆ ತೀವ್ರವಾಗಿ ಆತಂಕಗೊಂಡಿದೆ. ಈ ಚಳುವಳಿಯಲ್ಲಿ ಐಕ್ಯತೆಯನ್ನು ತರಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಕೆಲಸ ಮಾಡುತ್ತದೆ. ಮಾರ್ಕ್ಸ್‌ವಾದ ಲೆನಿನ್‌ವಾದಗಳ ಭದ್ರ ಬುನಾದಿಯ ಮೇಲೆ ಮತ್ತು ಅದನ್ನು ಎಲ್ಲಾ ತಪ್ಪುಗಳಿಂದ ರಕ್ಷಿಸುತ್ತಾ ಈ ಕೆಲಸ ಮಾಡುತ್ತದೆ.

ಅಭಿವೃದ್ಧಿಯ ಚಾರಿತ್ರಿಕ ಪಥ ವಿಶ್ವ ಕಮ್ಯುನಿಸ್ಟ್ ಚಳವಳಿಯ ಐಕ್ಯತೆಗೆ ಹಾದಿ ಮಾಡಿಕೊಡುತ್ತದೆ. ಇಂದಿನ ವರ್ಗಶಕ್ತಿಗಳ ಸಮೀಕರಣ ಒದಗಿಸುವ ಸದವಕಾಶಗಳನ್ನು ಉಪಯೋಗಿಸಿ ಕ್ರಾಂತಿಕಾರಿ ಚಳುವಳಿಯ ಮುನ್ನಡೆ ಸಾಧ್ಯವಾಗುತ್ತದೆಂದು ಸಿ. ಪಿ. ಐ. (ಎಂ.) ಆಶಿಸುತ್ತದೆ.

ಮಾರ್ಕ್ಸ್‌ವಾದ ಲೆನಿನ್‌ವಾದದ ರಕ್ಷಣೆಯಲ್ಲಿ ಈ ದಾಖಲೆಯ ಮುಂದೆ ಸಿ. ಪಿ. ಐ. ನ ದಾಖಲೆ ಏನಿದೆ? ಈ

# ಸಂಪಾದಕರಿಗೊಂದು ಮಾರುತ್ತರ

ರೀತಿಯ ಯಾವುದಾದರೂ ಹೋರಾಟವನ್ನು ಅದು ಮಾಡಿದ ಉದಾಹರಣೆ ಇದೆಯೇ?

## ಸಿ.ಪಿ.ಐ. ನಿಂದ ಪರಿಷ್ಕರಣವಾದಕ್ಕೆ ಬೆಂಬಲ

ಅವರ ದಾಖಲೆ ಇದೆ, ಆದರೆ ಅದು ವಿರುದ್ಧ ದಿಕ್ಕಿನಲ್ಲಿ. ಇಂದ್ರದೀಪ ಸಿನ್ಹಾರವರು 1957 ಮತ್ತು 1960ರ ವಿಶ್ವ ಕಮ್ಯುನಿಸ್ಟ್ ಚಳವಳಿಯ ದಸ್ತಾವೇಜುಗಳಿಂದ ವಿಪುಲವಾಗಿ ಉಲ್ಲೇಖಿಸುತ್ತಾರೆ. ಆದರೆ ಅವರದೇ 'ನ್ಯೂ ಏಜ್' ಪತ್ರಿಕೆಯ ಸಂಚಿಕೆಗಳನ್ನು ತೆಗೆದುನೋಡಿದರೆ ಸಾಕು ಗೊತ್ತಾಗುತ್ತದೆ. ಈ ಎರಡು ದಸ್ತಾವೇಜುಗಳ ಕ್ರಾಂತಿಕಾರೀ ತಿಳುವಳಿಕೆಯನ್ನು ಮುಂದೊಯ್ಯುವುದರ ಬದಲಾಗಿ ಅವರ ಪಕ್ಷ ವಿವಿಧ ಘಟ್ಟಗಳಲ್ಲಿ ವಿಶ್ವ ಕಮ್ಯುನಿಸ್ಟ್ ಚಳವಳಿಯಲ್ಲಿ ತಲೆಯೆತ್ತಿದ ಎಲ್ಲಾ ಪರಿಷ್ಕರಣವಾದಿ ಪ್ರವೃತ್ತಿಗಳನ್ನು ಬೆಂಬಲಿಸಿದೆ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ.

ಡೂಬ್‌ಚೆಕ್, ಜೆಕೋಸ್ಲೋವಾಕಿಯಾದಲ್ಲಿ ಪ್ರತಿಕ್ರಾಂತಿಕಾರಿ ಕಾರ್ಯನೀತಿ ಮುಂದಿಟ್ಟಾಗ ಸಿ.ಪಿ.ಐ. ನಾಯಕರು ಅವರನ್ನು ಮತ್ತು ಸಮಾಜವಾದೀ ಸಮಾಜ ರಚನೆ ಅವರ ಹೊಸ ಕಾಣಿಕೆಯನ್ನು ಬಾಯ್ತುಂಬಾ ಹೊಗಳಿದರು. ಆಫ್ಘಾನಿಸ್ಥಾನದಲ್ಲಿ ಹಾಫೀಜ್ ಅಮೀನರ ಸಾಹಸವಾದೀ ಧೋರಣೆಗೆ ಪೂರ್ಣ ಬೆಂಬಲನೀಡಿದರು.

ಇರಾನ್‌ನಲ್ಲಿ ಖುರಾನ್ ಪ್ರಮಾಣವಾದಿಗಳಿಗೆ ಇರಾನಿ ಕ್ರಾಂತಿಗೆ ಬೆಂಬಲದ ನೆಪದಲ್ಲಿ ಪೂರ್ಣ ಬೆಂಬಲ ನೀಡಿದರು. ಅವರು ಎಲ್ಲ ದೇಶಗಳಿಗೆ ಅನುಸರಿಸಲು ಕರೆ ನೀಡಿದ ತಮ್ಮ ಕಾರ್ಯಕ್ರಮದಲ್ಲಿ ಅಳವಡಿಸಿಕೊಂಡ ರಾಷ್ಟ್ರೀಯ ಪ್ರಜಾಪ್ರಭುತ್ವ, ಬಂಡವಾಳಶಾಹಿರಹಿತ ಮಾರ್ಗದ ಬಗ್ಗೆ ಹೆಚ್ಚು ಇಲ್ಲಿ ಹೇಳ ಹೋಗುವುದಿಲ್ಲ ಏಕೆಂದರೆ ಭಾರತ, ಈಜಿಪ್ಟ್, ಸೂಡಾರ್ನ ಬರ್ಮ ಮತ್ತು ಇನ್ನಿತರ ಕಡೆ ಅದರ ದಿವಾಳಿಕೋರತನ ಪ್ರಮಾಣಿತವಾಗಿದೆ.

ಸಮಾಜವಾದಿ ದೇಶಗಳ ಆಡಳಿತ ನಡೆಸುತ್ತಿರುವ ಕಮ್ಯೂನಿಸ್ಟ್ ಪಕ್ಷಗಳ ಮತ್ತು ಇತರ ಕಮ್ಯೂನಿಸ್ಟ್ ಪಕ್ಷಗಳ ಸಂಬಂಧದಲ್ಲಿ ನಾವು ಹೇಳಿರುವುದು, ಹಾಗೂ ತಮ್ಮ ವಿದೇಶ ನೀತಿಯ ಅಗತ್ಯಗಳಿಗಾಗಿ ಬೇರೆ ದೇಶಗಳ ವರ್ಗ ಹೋರಾಟಗಳನ್ನು ಗೌಣವಾಗಿಸಿವೆ ಎಂಬ ಸೂತ್ರ ಇಂದ್ರದೀಪ್ ಸಿನ್ಹಾರವರಿಗೆ ಕೋಪ ತಂದಿದೆ.

ಕಮ್ಯೂನಿಸ್ಟ್ ಅಂತರರಾಷ್ಟ್ರೀಯಕ್ಕೆ ಟಾಗ್ಲಿಯಾಟ್ಟಿ ಕೊಟ್ಟಿರುವ ವರದಿಯಿಂದ ಅವರು ಉದ್ಧವಾದ ಉಲ್ಲೇಖವನ್ನು ಕೊಟ್ಟಿದ್ದಾರೆ. "ಸೋವಿಯತ್ ಒಕ್ಕೂಟದ ಶಾಂತಿ ನೀತಿಯ ಉದ್ದೇಶದಲ್ಲಿ ಮತ್ತು ಬಂಡವಾಳಶಾಹಿ ದೇಶಗಳ ಶ್ರಮಿಕ ವರ್ಗ, ಕಮ್ಯೂನಿಸ್ಟ್ ಪಕ್ಷಗಳ ನೀತಿಯಲ್ಲಿ ಸಂಪೂರ್ಣ ಏಕತೆ ಇರುವುದು ನಿರ್ವಿವಾದ. ಆದರೆ ಈಗಾಗಲೇ ಆಡಳಿತ ನಡೆಸುತ್ತಿರುವ ಸೋವಿಯಟ್ ಶ್ರಮಿಕ ವರ್ಗದ ಮತ್ತು ಕಮ್ಯೂನಿಸ್ಟ್ ಪಕ್ಷದ ಕಾರ್ಯ ತಂತ್ರ ವಿಧಾನಗಳಿಗೂ ಮತ್ತು ಆಡಳಿತವನ್ನೂ ವಶಪಡಿಸಿಕೊಳ್ಳಲು ಹೋರಾಡುತ್ತಿರುವ ಶ್ರಮಿಕ ವರ್ಗ ಮತ್ತು ಕಮ್ಯೂನಿಸ್ಟ್ ಪಕ್ಷಗಳ ಕಾರ್ಯ ತಂತ್ರ ವಿಧಾನಗಳಿಗೂ ಎಲ್ಲಾ ಸಮಯದಲ್ಲಿಯೂ ಎಲ್ಲಾ ವಿಧದಲ್ಲಿಯೂ ಏಕತೆ ಇರಬೇಕೆಂದೇನೂ ಅಲ್ಲ"

ಈ ಉಲ್ಲೇಖವನ್ನೂ ಸಿನ್ಹಾರವರು ಅಪಾರ್ಥ ಮಾಡಿಕೊಂಡಂತೆ ಕಾಣುತ್ತದೆ. ಅದರಲ್ಲಿ ಎಲ್ಲಿಯೂ ಆಳುವ ಪಕ್ಷಗಳು ಸಮಾಜವಾದಿಯಲ್ಲದ ದೇಶಗಳ ಚಳುವಳಿಗೆ ಹಾನಿ ಮಾಡಬಹುದೆಂದಾಗಲೀ, ಇತರ ಕಮ್ಯೂನಿಸ್ಟ್ ಪಕ್ಷಗಳು ತಮ್ಮ ನೀತಿಗಳನ್ನು ಆಳುವ ಕಮ್ಯೂನಿಸ್ಟ್ ಪಕ್ಷಗಳ ನೀತಿಗನುಗುಣವಾಗಿರುವಂತೆ ಹೊಂದಿಸಿಕೊಳ್ಳಬೇಕೆಂದಾಗಲಿ ಉಲ್ಲೇಖಿಸಿಲ್ಲ. ಮಾರ್ಕ್ಸ್‌ವಾದಿ ಪಕ್ಷ ಹೊಸದಾಗಿ ಸ್ವತಂತ್ರವಾದ ದೇಶಗಳ ಆಳುವ ವರ್ಗಗಳಿಗೂ ಮತ್ತು ಸಮಾಜವಾದಿ ದೇಶಗಳಿಗೂ ಒಳ್ಳೆಯ ಸಂಬಂಧವಿರಬೇಕಾದ ಅಗತ್ಯವನ್ನು ಒತ್ತಿ ಹೇಳಿದೆಯಾದರೂ ಆ ದೇಶಗಳ ಶ್ರಮಿಕ ವರ್ಗದ ಮತ್ತು ಪ್ರಜಾಪ್ರಭುತ್ವೀಯ ಚಳುವಳಿಗೆ ಹಾನಿಕರವಾಗುವಂತೆ ಅಲ್ಲ. ಯಾವುದೇ ಸಮಾಜವಾದಿ ದೇಶಗಳ ನಾಯಕರು ಇಂದಿರಾಗಾಂಧಿಯ ಬಗ್ಗೆ ಮತ್ತು ಊಳಿಗಮಾನ್ಯ ವ್ಯವಸ್ಥೆಯ ಜೊತೆಯಲ್ಲಿ ಮತ್ತು ಸಾಮ್ರಾಜ್ಯಶಾಹಿಗಳ ಸಹಕಾರದೊಂದಿಗೆ ಬಂಡವಾಳಶಾಹಿಯನ್ನು ಬೆಳೆಸುವ ಅವರ ನೀತಿಯ ಬಗ್ಗೆ ಅವಶ್ಯಕತೆಗಿಂತ ಹೆಚ್ಚಾಗಿ ಹೊಗಳಿಕೆಯ ಮಳೆಯನ್ನು ಸುರಿಸಿದರೆ ಅವರು ನಮ್ಮ ಚಳುವಳಿಗೆ ಹಾನಿಯುಂಟು ಮಾಡುವುದಷ್ಟೇ ಅಲ್ಲ ನಮ್ಮ ಜನತೆಯ ಕಣ್ಣಲ್ಲಿ ತಮ್ಮ ಗೌರವವನ್ನು ಕಳೆದುಕೊಳ್ಳುತ್ತಾರೆ.

ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿ ತೀರಕೆಟ್ಟ ರೀತಿಯಲ್ಲಿ ಒಡೆದಿದೆ ಮತ್ತು ಈ ವಿಭಜನೆ ಚೈನಾ ಮತ್ತು ಸೋವಿಯತ್ ಕಮ್ಯುನಿಸ್ಟ್ ಪಕ್ಷಗಳಿಗಷ್ಟೇ ಸೀಮಿತವಾಗಿಲ್ಲವೆಂಬುದನ್ನು ಇಂದರ ದೀಪ್‌ಸಿನ್ಹಾರವರು ಗುರುತಿಸಿದ್ದಾರೆಂದು ಭಾವಿಸಿದ್ದೇನೆ. ಮಾರ್ಕ್ಸ್‌ವಾದ ಮತ್ತು ಲೆನಿನ್‌ವಾದದ ಮೂಲ ತತ್ವಗಳಾದ ಶ್ರಮಿಕ ಅಂತರರಾಷ್ಟ್ರೀಯತೆ, ಶ್ರಮಿಕರ ಸರ್ವಾಧಿಕಾರ, ಕಾರ್ಮಿಕರ ನಾಯಕತ್ವಗಳ ಬಗ್ಗೆಯೇ ವಿವಿಧ ಕಮ್ಯೂನಿಸ್ಟ್ ಪಕ್ಷಗಳು ಭಿನ್ನ ಭಿನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿವೆ. ಯುದ್ಧ ಮತ್ತು ಶಾಂತಿಯ ವಿಷಯದಲ್ಲಿ ಕೂಡ ಕಮ್ಯೂನಿಸ್ಟ್ ಪಕ್ಷಗಳು ಸೋವಿಯತ್ ಒಕ್ಕೂಟವನ್ನು ಅಮೇರಿಕಾ ಸಾಮ್ರಾಜ್ಯಶಾಹಿ ಜೊತೆಗೇ ಸೇರಿಸಿ ದೂಷಿಸುತ್ತಿದ್ದಾರೆ. ಆಫ್ಘಾನಿಸ್ತಾನಕ್ಕೆ ಸೋವಿಯೆತ್ ಸಹಾಯವನ್ನು ಮತ್ತು ಕಂಪೂಚಿಯಕ್ಕೆ ವಿಯೆಟ್ನಾಂನ ಸಹಾಯವನ್ನು ಬಹಿರಂಗವಾಗಿ ಖಂಡಿಸಿದ ಕಮ್ಯೂನಿಸ್ಟ್ ಪಕ್ಷಗಳೂ ಇವೆ. ಪೋಲೆಂಡ್ ದೇಶದಲ್ಲಿಯ ಮಾರ್ಷಲ್ ಲಾವನ್ನು ಖಂಡಿಸಿದ ಮತ್ತು ಪ್ರತಿ ಕ್ರಾಂತಿಕಾರಿ ಸಾಲಿಡಾರಿಟಿಗೆ ಬೆಂಬಲವನ್ನು ವ್ಯಕ್ತಪಡಿಸಿರುವ ಕಮ್ಯೂನಿಸ್ಟ್ ಪಕ್ಷಗಳೂ ಇವೆ. ಆದರೆ ಅಷ್ಟಕ್ಕಾಗಿ ಈ ಪಕ್ಷಗಳನ್ನು ಪೂರ್ತಿ ಅಲ್ಲಗಳೆಯಲಾಗುವುದಿಲ್ಲ.

ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯ ಅನುಭವದಿಂದ ಮಾರ್ಕ್ಸ್‌ವಾದಿ ಲೆನಿನ್‌ವಾದೀ ಮೂಲ ತತ್ವಗಳಿಂದ ಯಾವುದೇ ಕಮ್ಯೂನಿಸ್ಟ್ ಪಕ್ಷ ದೂರ ಹೋದರೆ ಮತ್ತು ತಮ್ಮ ದೇಶದ ವಸ್ತು ಸ್ಥಿತಿಗೆ ಅಳವಡಿಸುವುದರಲ್ಲಿ ಯಾವುದೇ ತಪ್ಪು ಮಾಡಿದರೆ ಆ ಪಕ್ಷಗಳೇ ಅದನ್ನು ತಿದ್ದಿಕೊಳ್ಳಬೇಕಾಗುತ್ತದೆ ಎಂದು ತಿಳಿದು ಬರುತ್ತದೆ.

ಈ ಪ್ರಶ್ನೆಗಳ ಮೇಲೆ ಅಂತರರಾಷ್ಟ್ರೀಯ ಚರ್ಚೆ ವಿವಿಧ ಕಮ್ಯೂನಿಸ್ಟ್ ಪಕ್ಷಗಳೊಡನೆ ಅಭಿಪ್ರಾಯಗಳ ವಿನಿಮಯ ಸಮಸ್ಯೆಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವುದಕ್ಕೆ ಸಹಾಯ ಮಾಡುತ್ತದೆ.

ಈ ಮೇಲೆ ವಿವರಿಸಿದಂತಹ ಅನೇಕ ಅನೇಕ ಪಕ್ಷಗಳೊಡನೆ ಸಿ. ಪಿ. ಐ. ಅಂತರ ಪಕ್ಷೀಯ ಸಂಬಂಧವನ್ನು ಹೊಂದಿದೆ. ಸಿನ್ಹಾರವರು ಇದು ಯಾವ ಆಧಾರದ ಮೇಲೆ ಎಂದು ಹೇಳುವರೇ? ಅವರ ನಡುವೆ ಪ್ರಮುಖ ವಿಷಯಗಳಲ್ಲಿ ಏಕತೆ ಇಲ್ಲ ಅದರ ವಿರುದ್ಧವಾಗಿ ತೀವ್ರ ಭಿನ್ನಾಭಿಪ್ರಾಯವಿದೆ. ಆದರೂ ಪಕ್ಷ ಪಕ್ಷಗಳ ಸಂಬಂಧವನ್ನು ಮುಂದುವರಿಸಲಾಗಿದೆ

**ಹರಕಿಷನ್‌ಸಿಂಗ್ ಸುರ್ಜೀತ್**
ಅನು: **ಜಿ. ಎಸ್. ನಾಗರಾಜ್**

ಅಂದಮೇಲೆ ಇವರು ಸಿ.ಪಿ.ಸಿ. ಮತ್ತು ಸಿ.ಪಿ.ಐ.(ಎಂ) ಸಂಬಂಧಗಳ ಪುನರಾರಂಭ ಬಗ್ಗೆ ಏಕೆ ದುಃಖ ಪಡುತ್ತಾರೆ?

ಇಂದ್ರದೀಪ್ ಸಿನ್ಹಾರವರೇ ಒಪ್ಪಿಕೊಂಡಿದ್ದಾರೆ ಬೀಜಿಂಗ್‌ನಿಂದ ಹೊರಬಿದ್ದ ಪತ್ರಿಕಾ ಪ್ರಕಟಣೆ ಮೂರು ಅಂಶಗಳನ್ನು ಸ್ಪಷ್ಟವಾಗಿ ಹೇಳಿದೆ ಎಂದು. ಒಂದನೆಯದಾಗಿ ಎರಡೂ ಕಡೆ ವಿಸ್ತಾರವಾದ ಅಭಿ

( 7ನೇ ಪುಟ ನೋಡಿ )

# 'ನ್ಯೂ ಏಜ್'ನ ಪ್ರತ್ಯುತ್ತರಕ್ಕೆ ಉತ್ತರ

ನಮ್ಮ ಪಕ್ಷ ಸಿಪಿಐ (ಎಂ) ಚೀನಾ ಕಮ್ಯುನಿಸ್ಟ್ ಪಾರ್ಟಿಯ ಜೊತೆಯಲ್ಲಿ ಸೌಹಾರ್ದಯುತ ಸಂಬಂಧಬೆಳೆಸಿರುವುದನ್ನು ಕಂಡು ಬಲಕಮ್ಯುನಿಸ್ಟ್ ಪಾರ್ಟಿಯ ಮುಖಪತ್ರಿಕೆ ನಮ್ಮ ಪಕ್ಷದ ಧೋರಣೆಯಕುರಿತುಅಸಂಬದ್ಧ ಲೇಖನ ಬರೆದಿತ್ತು. ಸಿಪಿಐ (ಎಂ) ಪಾಲಿಟ್‌ಬ್ಯೂರೋ ಸದಸ್ಯರಾದ ಹರಕಿಶನ್‌ಸಿಂಗ್ ಸೂರಜಿತ ಇವರು ಸುಳ್ಳು ಸಂಗತಿಗಳಿಂದ ಸೇರಿದ ಸಿ.ಪಿ.ಐ.ಯ ಲೇಖನಕ್ಕೆ ಸರಿಯಾದ ಉತ್ತರ ಕೊಟ್ಟಿದ್ದರೂ ಕೂಡ, ಪರಿಷ್ಕರಣವಾದಿಗಳು ಸಮಾಧಾನಗೊಳ್ಳದೆ ಜೂನ್ 6ರ ನ್ಯೂಏಜ್ ಪತ್ರಿಕೆಯಲ್ಲಿ ಪುನಃ ಸುಳ್ಳು ಕಂತೆಯನ್ನು ಮುಂದುವರಿಸಿದ್ದಾರೆ. ಚರಿತ್ರೆಯ ಅನುಭವದಿಂದ ಇವರು ಏನೂ ಪಾಠ ಕಲಿತಂತೆ ಕಂಡುಬರುವುದಿಲ್ಲ. ನ್ಯೂ ಏಜಿನ ಎರಡನೇ ಲೇಖನಕ್ಕೆ ಹರಿಕಿಶನ್‌ಸಿಂಗ್ ಸೂರಜಿತ್ ಅವರು ಮತ್ತೆ ಹೆಚ್ಚಿನ ಸ್ಪಷ್ಟೀಕರಣ ಕೊಟ್ಟು ಲೇಖನ ಬರೆದಿದ್ದು ಅದು 12-6-83ರ ಪೀಪಲ್ಸ್ ಡೆಮೋಕ್ರಸಿಯಲ್ಲಿ ಪ್ರಕಟವಾಗಿದೆ. ಅದರ ಎಲ್ಲ ಅಂಶಗಳನ್ನು ನಾವು ಇಲ್ಲಿ ಕೊಡುವುದಿಲ್ಲ. ಆದರೆ ಅದರಲ್ಲಿಯ ಮುಖ್ಯಾಂಶಗಳು ಹೀಗಿವೆ :

"ನಮ್ಮ ಪಕ್ಷ ಸಿಪಿಐ (ಎಂ) ಚೀನಾ ಕಮ್ಯೂನಿಸ್ಟ್ ಪಾರ್ಟಿಯ ಜೊತೆಯಲ್ಲಿ ಸಂಬಂಧ ಬೆಳೆಸಿಕೊಂಡ ನಂತರ, ಸಿಪಿಐ ಯಲ್ಲುಂಟಾಗಿದ್ದ ಒಡಕು ಕುರಿತು ಚರ್ಚೆ ಪ್ರಾರಂಭಿಸುವ ವಿಚಾರ ಸಿಪಿಐ ಮುಖಂಡರು ಯಾಕೆ ಪ್ರಾರಂಭಿಸಿದ್ದಾರೆಂದು ತಿಳಿಯದಾಗಿದೆ, ಎರಡೂ ಪಕ್ಷಗಳು ಕೂಡಿ ಸಂಯುಕ್ತ ಕಾರ್ಯಾಚರಣೆಯ ಕಾರ್ಯಕ್ರಮವನ್ನು ಹಮ್ಮಿಕೊಂಡು ಅದು ಮುಂದುವರಿಯುತ್ತಿರುವಾಗ ಇಂಥ ಚರ್ಚೆ ಅಕಾಲಿಕವೆಂದೇ ಹೇಳಬೇಕಾಗಿದೆ, ನನ್ನ ಉತ್ತರದ ನಂತರ ಈ ವಿಷಯವನ್ನು ಅಲ್ಲೇ ಮುಗಿಸಬಹುದಿತ್ತು. ವಾದ ವಿವಾದವನ್ನು ಮುಂದುವರಿಸುವ ವಿಚಾರ ಸಿಪಿಐಗೆ ಇದ್ದಂತೆ ಕಂಡುಬರುತ್ತದೆ. ನಾವು ಎತ್ತಿದ ವಿಷಯಗಳಿಗೆ ಅವರ ಮುಖಪತ್ರದಲ್ಲಿ ಎರಡು ಲೇಖನಗಳನ್ನು ಬರೆಯಲಾಗಿದೆ. ಚರ್ಚೆ ಯಾವ ರೀತಿಯಲ್ಲಿ ನಡೆಯಬೇಕೆಂಬ ಸಂಸ್ಕೃತಿಯ ಕುರಿತು ಆ ಲೇಖನದಲ್ಲಿ ಇಂದ್ರದೀಪ್ ಸಿನ್ಹಾ ಅವರು ಒಂದು ಉಪನ್ಯಾಸವನ್ನೇ ಕೊಟ್ಟಿದ್ದಾರೆ, ಚರಿತ್ರೆಯನ್ನು ಅಪಭ್ರಂಶಗೊಳಿಸಿ, ಸುಳ್ಳಿನಕಂತೆಯನ್ನಾಗಿ ಮಾಡುವುದೇ ಸಂಸ್ಕೃತಿಯಾಗಿದ್ದರೆ, ಅದನ್ನು ಸ್ವೀಕರಿಸಲು ಸಾಧ್ಯವಿಲ್ಲ.

### ಮೂರು ಪ್ರಶ್ನೆಗಳು

ಅವರು ಮೂರು ಪ್ರಶ್ನೆಗಳನ್ನೆತ್ತಿದ್ದಾರೆ: 1) ಸೌಹಾರ್ದ ಸಂಬಂಧದ ಆಧಾರ. 2) ಶ್ರಮಜೀವಿ ವರ್ಗದ ಅಂತರ್ರಾಷ್ಟ್ರೀಯತೆಯ ಪ್ರಶ್ನೆ 3) ಮುಖ್ಯವಾಗಿ ಪಾರ್ಟಿ ಒಡೆಯಲು ಕಾರಣ.

ಕಮ್ಯುನಿಸ್ಟ್ ಚಳುವಳಿಯ ಇತರ ಅಂಗಸಂಸ್ಥೆಗಳೊಡನೆ ಸೌಹಾರ್ದ ಸಂಬಂಧ ಬೆಳೆಸುವ ವಿಚಾರದಲ್ಲಿ ನಾವೇನೂ ಸಿಪಿಐಯ ಮಾರ್ಗದರ್ಶನದಂತೆ ನಡೆಯುವುದಿಲ್ಲ. ನಮ್ಮ ಜೊತೆಗೆ ಸೌಹಾರ್ದ ಸಂಬಂಧ ಇಟ್ಟುಕೊಂಡಿದ್ದ ಪಕ್ಷಗಳೊಡನೆ ತಾವು ಸಂಬಂಧ ಇಟ್ಟುಕೊಳ್ಳುವುದಿಲ್ಲೆಂದು ಈ ಮುಂಚೆ ಅವರು ನಿರ್ಧರಿಸಿದ್ದರು.

ನಮ್ಮ 11ನೇ ಪಾರ್ಟಿ ಕಾಂಗ್ರೆಸ್ಸಿನಲ್ಲಿ ಈ ರೀತಿ ನಿರ್ಣಯ ಕೈಗೊಂಡಿದ್ದೆವು. "ನಮ್ಮ ಪಾರ್ಟಿಯ ಜೀವನ ಮತ್ತು ಅನುಭವದಿಂದ ಪಾಠಕಲಿತು. ಹಾಗೆಯೇ ಜಗತ್ತಿನ ಕಮ್ಯುನಿಸ್ಟ ಚಳುವಳಿಯಲ್ಲಿ ಈಗಿರುವ ನಿಜವಾದ ಪರಿಸ್ಥಿತಿಗೆ ಹೊಂದಿಕೊಂಡು, ಆಯಾ ಪಾರ್ಟಿಗಳೊಡನೆ ರಾಜಕೀಯಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿದ್ದಾಗ್ಯೂ ಕೂಡ. ಎಲ್ಲಾ ಕಮ್ಯುನಿಸ್ಟ್‌ಪಾರ್ಟಿಗಳೊಡನೆ ಅಂತರ್ರಾಷ್ಟ್ರೀಯ ಶ್ರಮಜೀವಿವರ್ಗದ ನಿಲುವೆಯನ್ನೇ ಸ್ವೀಕರಿಸಿದ್ದೇವೆ. ಇದಕ್ಕನುಸಾರವಾಗಿ. ಬೇರೆ ಬೇರೆ ದೇಶಗಳ ಕಮ್ಯುನಿಸ್ಟ ಪಾರ್ಟಿಗಳನ್ನೆಲ್ಲ ಬಂಧುತ್ವದ ಕಮ್ಯುನಿಸ್ಟ್ ಪಾರ್ಟಿಗಳೆಂದು ಪರಿಗಣಿಸುವ ಅಭಿಪ್ರಾಯದವರಾಗಿದ್ದೇವೆ. ಅವರು ಅಪೇಕ್ಷೆ ವ್ಯಕ್ತ ಮಾಡಿದಲ್ಲಿ, ಅವರ ಜೊತೆಯಲ್ಲಿ ಸೌಹಾರ್ದ ಸಂಬಂಧ ಬೆಳೆಸಿಕೊಳ್ಳಲು ಸಿದ್ಧರಿದ್ದೇವೆ."

ನಾವು ಪ್ರಾರಂಭದಿಂದಲೂ ಈ ಧೋರಣೆಯನ್ನೇ ಅನುಸರಿಸುತ್ತ ಬಂದಿದ್ದೇವೆ. ನಮ್ಮೊಳಗೆ ಭಿನ್ನಾಭಿಪ್ರಾಯವಿದ್ದರೂ ಕೂಡ, ಸೋವಿಯತ್ ರಷ್ಯಾ ಮತ್ತು ಚೀನಾಗಳನ್ನು ಬಲಿಷ್ಟವಾದ ಸಮತಾವಾದಿ ದೇಶಗಳೆಂದು ಪರಿಗಣಿಸಿದ್ದೇವೆ. ಅಷ್ಟೇ ಅಲ್ಲ ರಷ್ಯಾ ಮತ್ತು ಚೀನಾ ಕಮ್ಯೂನಿಸ್ಟ್ ಪಾರ್ಟಿಗಳನ್ನು ಕಮ್ಯುನಿಸ್ಟ್ ಪಾರ್ಟಿಗಳೆಂದೇ ಕರೆದಿದ್ದೇವೆ. ಅಂತರಾಷ್ಟ್ರೀಯ ಕಮ್ಯೂನಿಸ್ಟ್ ಚಳವಳಿಯಲ್ಲಿ ಸೈದ್ಧಾಂತಿಕ ಚರ್ಚೆಯ ಪ್ರಶ್ನೆಯೇ ಇರಲಿ ಅಥವಾ ರಾಷ್ಟ್ರದ ಪರಿಸ್ಥಿತಿಯ ತಿಳುವಳಿಕೆಯ ವಿಷಯವೇ ಇರಲಿ_ಇವುಗಳ ಕುರಿತು ವಾಸ್ತವ ಪರಿಸ್ಥಿತಿಯನ್ನು ವಿಪರ್ಯಾಸಗೊಳಿಸುತ್ತಿರುವ, ಆಳವಾದ ತಿಳುವಳಿಕೆಯಲ್ಲಿ ಕೊರತೆ ಇರುವ ಸಿ. ಪಿ. ಐ. ಪಕ್ಷದಿಂದ ಮಾರ್ಕ್ಸ್‌ವಾದಲೆನಿನ್‌ವಾದವನ್ನು ಕಲಿಯಲು ನಾವು ಬಯಸುವುದಿಲ್ಲ. ಚೀನಾದ ಜೊತೆಯಲ್ಲಿ ರಷ್ಯಾ ಹಾಗೂ ಮತ್ತಿತರ ಸಮತಾವಾದಿ ದೇಶಗಳು ತಮ್ಮ ಸಂಬಂಧಗಳನ್ನು ಸುಧಾರಿಸಿ ಕೊಳ್ಳಲು ಪ್ರಯತ್ನ ನಡೆಸುತ್ತಿದ್ದಾರೆಂದು ತಿಳಿದ ಭಾರತ ಕಮ್ಯೂನಿಸ್ಟ್ ಪಕ್ಷ, ನಾವು ಚೀನಾ ಕಮ್ಯೂನಿಸ್ಟ್ ಪಾರ್ಟಿ ಜೊತೆಯಲ್ಲಿ ಸಂಬಂಧವನ್ನು ಬೆಳೆಸಿದಾಗ ಅವರು ಅಷ್ಟು ಚಿಂತೆಗೆ ಯಾಕೆ ಒಳಗಾಗಿದ್ದಾರೆಂಬುದೇ ತಿಳಿಯಲಾರದಾಗಿದೆ. ಅವರಿನ್ನು ಚೀನಾ ವಿರೋಧಿ ಧೋರಣೆಯನ್ನು ಬಿಟ್ಟು ಕೊಟ್ಟಿಲ್ಲೆಂದು. ಹೇಳಬೇಕಾಗುತ್ತದೆ".

( ಸಂಪಾದಕ ಮಂಡಲಿ )

## ಲಾರಿ ಚಾಲಕರ ಮತ್ತು ಕ್ಲೀನರ್‌ಗಳ ಸಂಘ ಅಸ್ತಿತ್ವಕ್ಕೆ

ರಾಯಚೂರು :

ರಾಯಚೂರು ಜಿಲ್ಲೆಯಲ್ಲಿ 1979 ರಲ್ಲಿ ಲಾರಿ ಮತ್ತು ಕ್ಲೀನರ್ಸ್‌ಗಳ ಚಾರಿತ್ರಿಕ ಹೋರಾಟದ ನಂತರ, ಮಾಲೀಕರ ಕುತಂತ್ರದಿಂದ ಮುರಿದು ಹೋದ ಚಾಲಕ ಮತ್ತು ಕ್ಲೀನರ್ಸ್‌ಗಳ ಸಂಘವನ್ನು ಮಾಲೀಕರ ದಬ್ಬಾಳಿಕೆಯ ವಿರುದ್ಧ ಸೆಟೆದು ಪುನಃ ಅಸ್ತಿತ್ವಕ್ಕೆ ಬಂದಿತು.

ಕರ್ನಾಟಕದ ಹಿರಿಯ ಶ್ರೀಮಂತರಲ್ಲಿ ಒಬ್ಬರಾದ ಅಶೋಕ ಕೀರ್ತನ ಎಕ್ಸ್‌ಪ್ರೆಸ್ ಟ್ರಾನ್ಸ್‌ಪೋರ್ಟ್ ಸೇಂಟ್ ಆಫೀಸಿನಲ್ಲಿ ಸುಮಾರು 50 ಲಾರಿಗಳು ದಿನಕ್ಕೆ ಹತ್ತಾರು ಟ್ರಿಪ್ ಹೊಡೆಯುತ್ತಿದ್ದು ಬಡವರ ಮೈಯಲ್ಲಿ ಹೆಂಡ ಇಳಿಸಿ ಅವರ ರಕ್ತವನ್ನು ಹೀರುತ್ತಿವೆ. ಈ ಡಿಪೋದ ಒಳಗೆ ಮತ್ತು ಲಾರಿಗಳ ಮೇಲೆ ಸುಮಾರು 200 ಕಾರ್ಮಿಕರ ಜೀವನ ಅವಲಂಬಿತವಾಗಿದೆ. ಈ ಸೇಂದಿ ಉದ್ದಿಮೆಯಲ್ಲಿ ಕೋಟಿಗಟ್ಟಲೆ ಲಾಭವಿದ್ದರೂ ಇಲ್ಲಿಯ ಮಾಲೀಕ ವರ್ಗದ ಸ್ವಾರ್ಥ ದರ್ಪದ ಫಲವಾಗಿ ಇಲ್ಲಿಯ ಕಾರ್ಮಿಕರ ಸ್ಥಿತಿಗತಿ ತುಂಬಾ ಚಿಂತಾಜನಕವಾಗಿದೆ. ಕೆಲಸಕ್ಕಿರುವ ಹೆಚ್ಚಿನ ಕಾರ್ಮಿಕರು ಹರಿಜನ-ಗಿರಿಜನ ಮತ್ತು ಮುಸ್ಲಿಂ ಜನಾಂಗಕ್ಕೆ ಸೇರಿದ ಅಲ್ಪಸಂಖ್ಯಾತರಾಗಿದ್ದು ತೀರಾ ತುಳಿತಕ್ಕೊಳಪಟ್ಟಿದ್ದಾರೆ.

ಆ ಕಾರ್ಮಿಕರು ಮಾನವೀಯವಾದ ಯಾವುದೇ ಲೇಬರ್ ಕಾಯಿದೆಗಳಿಂದ ವಂಚಿತರಾಗಿದ್ದು 24 ತಾಸು ದುಡಿಯುತ್ತಿದ್ದು ತಿಂಗಳೊಂದಕ್ಕೆ 150 ರಿಂದ 200ರ ಒಳಗೆ ಸಂಬಳ ಪಡೆಯುತ್ತಿದ್ದು, ಯಾವುದೇ ರೀತಿಯ ರಜಾ ಸೌಲಭ್ಯ, ಬೋನಸ್, ಪ್ರಾವಿಡೆಂಟ್ ಫಂಡ್, ಇ. ಎಸ್. ಐ. ಮುಂತಾದವುಗಳಿಂದ ವಂಚಿತರಾಗಿದ್ದಾರೆ. ಇದರ ಬಗ್ಗೆ ಇಲ್ಲಿಯವರೆಗೂ ಸಂಬಂಧಪಟ್ಟ ಅಧಿಕಾರಿಗಳು ಯಾವುದೇ ಕ್ರಮ ನಡೆಸಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ಅಲ್ಲಿನ ಡ್ರೈವರ್‌ಗಳು ಮತ್ತು ಕ್ಲೀನರುಗಳು ಸಿ. ಐ. ಟಿ. ಯು. ಕಚೇರಿಗೆ ಬಂದು ತಮಗೆ ನಾಯಕತ್ವ ಕೊಡಲು ಕೇಳಿಕೊಂಡರು. 16-7-83ರಂದು ಸರ್ವಸದಸ್ಯರ ಸಭೆ ನಡೆದು ಲಾರಿ ಚಾಲಕರ ಮತ್ತು ಕ್ಲೀನರುಗಳ ಸಂಘವನ್ನು ಅಸ್ತಿತ್ವಕ್ಕೆ ತರಲಾಯಿತು.

ಸಂಘದ ಪದಾಧಿಕಾರಿಗಳು:- ಅಧ್ಯಕ್ಷರು: ಕಲಾಲಬಂಡಿ ಪುರುಶೋತ್ತಮ. ಉಪಾಧ್ಯಕ್ಷರು: ಬಾಬು ಮಿಯಾ ಮತ್ತು ಸತ್ತಾರ್ ಸಾಬ್, ಪ್ರಧಾನ ಕಾರ್ಯದರ್ಶಿ: ಯಮುನಪ್ಪ, ಕಾರ್ಯದರ್ಶಿ: ಭಾಸ್ಕರ್, ಸಹ ಕಾರ್ಯದರ್ಶಿಗಳು: ಚೆನ್ನ ಮಿಯಾ ಮತ್ತು ತಾಯಣ್ಣ ಯರಗೇರ. ಖಜಾಂಚಿ: ಲಾಡ್ಲೇ ಸಾಬ್.

## ಬಿ. ಡಿ. ಕೆ. ಸುಂದತ್ತಾ ಕಾರ್ಮಿಕರ ಬೆಂಬಲಾರ್ಥ ಧರಣಿ ಸತ್ಯಾಗ್ರಹ

ಧೀರೋದಾತ್ತ ಹೋರಾಟ ನಿರತ ಬಿ. ಡಿ. ಕೆ. ಸುಂದತ್ತಾ ಕಾರ್ಮಿಕರ ಹೋರಾಟಕ್ಕೆ ಬೆಂಬಲಾರ್ಥವಾಗಿ, ಧಾರವಾಡದ ದಿ ಇಂಡಿಯನ್ ಪ್ಲೈವುಡ್ ಕಾರ್ಮಿಕ ಸಂಘದಿಂದ ಧರಣಿ ಸತ್ಯಾಗ್ರಹ ನಡೆಯಿತು.

ಕಳೆದ 77 ದಿನಗಳಿಂದ ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ, 200 ಜನರ ಕುಟುಂಬಗಳ ಜೀವನಾವಶ್ಯಕ ಕೂಲಿಗಾಗಿ ನಡೆದಿರುವ ಹೋರಾಟಕ್ಕೆ ಹಾಗೂ ಕಾರ್ಖಾನೆಯ ಬಾಹಿರ ಹೊರಗೆಳೆದು ಹಾಕಿ 1000 ಕುಟುಂಬಗಳ ಜನರನ್ನು ಬೀದೀಪಾಲು ಮಾಡಿರುವ ಸುಂದತ್ತಾ ಹಾಗೂ ಬಿ.ಡಿ.ಕೆ. ಮಾಲೀಕರ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿ ಕಾರ್ಮಿಕರ ಹೋರಾಟವನ್ನು ಬೆಂಬಲಿಸಿ, ಸರಕಾರ ಶೀಘ್ರ ಮಧ್ಯಪ್ರವೇಶ ಮಾಡಿ ಸಮಸ್ಯೆಯನ್ನು ಇತ್ಯರ್ಥಗೊಳಿಸುವಂತೆ ಒತ್ತಾಯಿಸಿ ಧಾರವಾಡದ 'ದಿ ಇಂಡಿಯನ್ ಪ್ಲೈವುಡ್ ಕಾರ್ಮಿಕ ಸಂಘ' ದವರಿಂದ ಹತ್ತು ಜನರ ನಿಯೋಗವೊಂದು ದಿ. 13-7-83 ರಂದು ಧರಣಿ ಸತ್ಯಾಗ್ರಹ ನಡೆಸಿತು.

ಕೊನೆಯಲ್ಲಿ ಕಾರ್ಮಿಕರನ್ನುದ್ದೇಶಿಸಿ ಸಂಘದ, ಧುರೀಣರಾದ ಕಾ| ಎಂ.ಬಿ. ಕಟ್ಟಿ ಹಾಗೂ ಕಾ| ಎಸ್. ಆರ್. ದರೆಪ್ಪನವರು ಮಾತನಾಡಿ ಈ ಹೋರಾಟಕ್ಕೆ ತನು, ಮನ, ಧನದಿಂದ ಬೆಂಬಲ ಸೂಚಿಸಿದರು. ನಗರದಲ್ಲಿ ಶಾಂತತೆ ಸುವ್ಯವಸ್ಥೆಗೆ ಧಕ್ಕೆ ತರಬಹುದಾದ ಮುಂಚೆ ಸರಕಾರ ಜವಾಬ್ದಾರಿಯಿಂದ ವರ್ತಿಸಿ ಈ ಎರಡೂ ಸಮಸ್ಯೆಗಳನ್ನು ಇತ್ಯರ್ಥಗೊಳಿಸಬೇಕೆಂದು ಒತ್ತಾಯಿಸಿದರು.

## S.F.I. ಹೋರಾಟಕ್ಕೆ ಯಶಸ್ಸು

ಕೆಲ ದಿನಗಳ ಹಿಂದೆ ಹೊಸಪೇಟೆ ತಾಲ್ಲೂಕಿನ ಕಮಲಾಪುರ ಆಶ್ರಮ ಶಾಲೆಯ ವರ್ಗಾವಣೆ ತಡೆಗಟ್ಟಲು ಎಸ್. ಎಫ್. ಐ. ನಗರ ಸಮಿತಿ ಸಂಬಂಧಿಸಿದ ಅಧಿಕಾರಿಗಳಿಗೆ ಒತ್ತಾಯಿಸಿತ್ತು. ಇದನ್ನು ಗಮನಿಸಿದ ಬಿ. ಡಿ. ಓ. ತಕ್ಷಣ ತನಿಖೆ ಮಾಡಿ ಆಶ್ರಮ ಶಾಲೆಯಲ್ಲಿ ವಿದ್ಯಾರ್ಥಿಗಳ ಕೊರತೆಯಿದೆ. ಈ ಕೊರತೆಯನ್ನು ಎಸ್. ಎಫ್. ಐ. ನೀಗಿಸಬೇಕೆಂದು ಕೇಳಿಕೊಂಡರು. ಇದಕ್ಕೆ ಎಸ್. ಎಫ್. ಐ. ನಗರ ಸಮಿತಿ ಒಪ್ಪಿಗೆ ಸೂಚಿಸಿ ಹಳ್ಳಿ-ಹಳ್ಳಿಗಳಿಗೆ ಭೇಟಿಕೊಟ್ಟು ವಿದ್ಯಾರ್ಥಿಗಳನ್ನು ಆಶ್ರಮ ಶಾಲೆಗೆ ಸೇರಿಸುವಲ್ಲಿ ಯಶಸ್ವಿಯಾಯಿತು. ಎಸ್. ಎಫ್. ಐ. ನ ಈ ಕಾರ್ಯವೇ ಆಶ್ರಮ ಶಾಲೆ ವರ್ಗಾವಣೆ ನಿಲುಗಡೆಗೆ ಕಾರಣವಾಯಿತು. ಹಾಗಾಗಿ ಎಸ್. ಎಫ್. ಐ. ಹೋರಾಟಕ್ಕೆ ಯಶಸ್ಸು ಲಭಿಸಿದೆ. ಮತ್ತು ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳ ಕುಂದು ಕೊರತೆಗಳನ್ನು ತಿಳಿಯಲು ಅಧಿಕಾರಿಗಳು ಹಾಸ್ಟೆಲ್‌ಗಳಿಗೆ ಭೇಟಿ ಕೊಡುತ್ತಿರಬೇಕೆಂದು ಎಸ್. ಎಫ್. ಐ. ನಗರ ಸಮಿತಿ ಅಧಿಕಾರಿಗಳಲ್ಲಿ ಕೋರಿದೆ.

### ಕಾಲೇಜ್ ಸ್ಥಾಪಿಸಲು ಸರ್ಕಾರದ ಭರವಸೆ

ಬಳ್ಳಾರಿ ಜಿಲ್ಲೆ ಹೊಸಪೇಟೆಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ಸ್ಥಾಪಿಸಬೇಕೆಂದು ಅಲ್ಲಿಯ ವಿದ್ಯಾರ್ಥಿ ಸಂಘವು ಈ ಹಿಂದೆ ... ಪ್ರಾರಂಭ ಮಾಡಿತ್ತು. ... ಹೊಸಪೇಟೆ ಎಸ್. ಎಫ್. ಐ. ನಗರ ಸಮಿತಿ ... ಸೂಚಿಸಿದ ತಕ್ಷಣ ಕಾಲೇಜ್ ಸ್ಥಾಪನೆಯಾಗಬೇಕೆಂದು ... ಒತ್ತಾಯಿಸಿತು. ವಿದ್ಯಾರ್ಥಿಗಳ ... ಗಮನಿಸಿದ ಸರ್ಕಾರವು ಸದ್ಯದ ಪರಿಸ್ಥಿತಿಯಲ್ಲಿ ಸರ್ಕಾರಕ್ಕೆ ಹಣದ ಕೊರತೆಯಿರುವ ಕಾರಣವನ್ನೊಡ್ಡಿ ಮುಂದಿನ ಶೈಕ್ಷಣಿಕ ವರ್ಷ 1984-85ರಲ್ಲಿ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ಮತ್ತು ತುಮಕೂರು ಜಿಲ್ಲೆಯ ಪಾವಗಡದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ಸ್ಥಾಪಿಸುವುದಾಗಿ ಸರ್ಕಾರ ಭರವಸೆ ನೀಡಿದೆ.

### ಎಸ್. ಎಫ್. ಐ. ನಿಂದ ಮನವಿ

ದಕ್ಷಿಣ ಕನ್ನಡದಲ್ಲಿ ಶಿಕ್ಷಣ ... ಕರ್ನಾಟಕ ರಾಜ್ಯ ಸರ್ಕಾರವು ತೆಗೆದುಕೊಂಡ ನಿರ್ಣಯವನ್ನು ಖಂಡಿಸಿ, ಅವುಗಳನ್ನು ಸಂಪೂರ್ಣ ರದ್ದು ಪಡಿಸಲು ಎಸ್. ಎಫ್. ಐ. ಹೊಸಪೇಟೆ ನಗರ ಸಮಿತಿ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆ ಅವರಿಗೆ 17-7-83ರಂದು ಮನವಿಯೊಂದನ್ನು ಅರ್ಪಿಸಿತೆಂದು ಹೊಸಪೇಟೆ ನಗರ ಸಮಿತಿಯ ಸಹ ಕಾರ್ಯದರ್ಶಿ ಎಲ್. ಮಂಜುನಾಥ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರೂ. ಒಂದು ಲಕ್ಷ ಪಾರ್ಟಿ ನಿಧಿಗೆ ಕರೆ

ಇಂದಿನ ರಾಜ್ಯದ ರಾಜಕೀಯ ಪರಿಸ್ಥಿತಿಯಲ್ಲಿ ರೈತ, ಕಾರ್ಮಿಕ ವಿದ್ಯಾರ್ಥಿ, ಯುವಜನತೆ ಹಾಗೆಯೇ ಮಧ್ಯಮ ವರ್ಗದ ಮತ್ತು ಎಲ್ಲಾ ಜನತೆ ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟಗಳನ್ನು ಸಂಘಟಿಸಿ ಯಶಸ್ವಿಗೊಳಿಸುವ ಜವಾಬ್ದಾರಿಯನ್ನು ಮಾರ್ಕ್ಸಿಸ್ಟ್ (ಭಾರತ) ಕಮ್ಯುನಿಸ್ಟ್ ಪಾರ್ಟಿ ಹೊರಬೇಕಾಗಿದೆ. ಅಂಥ ಚರಿತ್ರಾರ್ಹ ಜವಾಬ್ದಾರಿಯನ್ನು ಅದು ಹೊತ್ತಿದೆ. ರಾಜ್ಯಾದ್ಯಂತ ಹಲವಾರು ಕಡೆಗಳಲ್ಲಿ ಎಲ್ಲ ವಿಭಾಗಗಳ ಹೋರಾಟ ನಡೆಯುತ್ತಿದೆ. ಅದನ್ನು ಇನ್ನೂ ವಿಶಾಲಗೊಳಿಸಬೇಕಾಗಿದೆ. ಹೊಸ ಕ್ಷೇತ್ರಗಳಲ್ಲಿ ಸಂಘಟನೆ ಕಟ್ಟಬೇಕಾಗಿದೆ, ಚಳುವಳಿ ನಡೆಸಬೇಕಾಗಿದೆ.

ಮೊನ್ನೆ ನಡೆದ ವಿಧಾನಸಭೆಯ ಚುನಾವಣೆಯ ನಂತರ ಈ ಜವಾಬ್ದಾರಿ ಮತ್ತಷ್ಟು ಹೆಚ್ಚಾಗಿದೆ.

ಈ ರೀತಿ ರಾಜ್ಯಾದ್ಯಂತ ನಮ್ಮ ಚಳುವಳಿ ವಿಶಾಲಗೊಳ್ಳುತ್ತಿರುವಾಗ ಅವುಗಳಿಗೆ ಮಾರ್ಗದರ್ಶನ ನೀಡಲು ಮುಖಂಡತ್ವ ಅತ್ಯಗತ್ಯ. ಅದಕ್ಕಾಗಿ ಪೂರ್ಣ ಕಾಲದ, ಅರ್ಧ ಕಾಲದ ಕಾರ್ಯಕರ್ತರನ್ನು ನೇಮಿಸಿ, ಪೋಷಿಸಿ, ಬೆಳಗಿಸಿ ಉಳಿಸಿಕೊಳ್ಳುವುದು ಅಷ್ಟೇ ಮಹತ್ವದ್ದಾಗಿದೆ.

ಈ ಕಾರ್ಯಗಳು ಸರಿಯಾಗಿ ನಡೆಸಲ್ಪಡಬೇಕಾದರೆ ಹಣ ಅತ್ಯಗತ್ಯ. ರಾಜ್ಯ ಕಮಿಟಿಯ ಆರ್ಥಿಕ ಪರಿಸ್ಥಿತಿ ಅತಿ ಗಂಭೀರವಾಗಿದೆ, ಆದರಿಂದಾಗಿ ದೈನಂದಿನ ಚಟುವಟಿಕೆಗಳಿಗೂ, ಚಳುವಳಿಯ ಮುಂದುವರಿಕೆಗೂ ಅಡ್ಡಿಯಾಗುತ್ತಿದೆ.

ಆದ್ದರಿಂದ ಈ ವರ್ಷ ಪಾರ್ಟಿಗೆ ಒಂದು ಲಕ್ಷ ನಿಧಿ ಕೂಡಿಸಬೇಕೆಂದು ನಿರ್ಧರಿಸಿದ್ದೇವೆ. ಈ ನಿಧಿಯನ್ನು ಪೂರ್ಣಗೊಳಿಸಲು, ಎಲ್ಲ ರೈತರೂ, ಕಾರ್ಮಿಕರೂ, ನೌಕರರೂ, ವಿದ್ಯಾರ್ಥಿ-ಯುವ ಜನತೆಯೂ ಮಹಿಳೆಯರೂ, ಮಧ್ಯಮವರ್ಗದವರಲ್ಲದೆ, ಎಲ್ಲ ಪ್ರಜಾಪ್ರಭುತ್ವವಾದಿ ಜನರೂ ಉದಾರ ಹಸ್ತದಿಂದ ಸಹಾಯ ಮಾಡಬೇಕೆಂದು ವಿನಂತಿ.

ಟಿ. ರಾಮಚಂದ್ರರಾವ್
ಕಾರ್ಯದರ್ಶಿ
ಕರ್ನಾಟಕ ರಾಜ್ಯ ಸಮಿತಿ ಸಿಪಿಐ(ಎಂ)

## ಆಂಧ್ರ ಸರಕಾರಿ ನೌಕರರ ಮುಷ್ಕರ

ಮೊನ್ನೆ ನಡೆದ ಚುನಾವಣೆಯಲ್ಲಿ ಆಂಧ್ರದಲ್ಲಿ ತೆಲುಗು ದೇಶಂ ಪಕ್ಷದ ಎನ್.ಟಿ.ಆರ್. ಸರಕಾರ ಅಧಿಕಾರಕ್ಕೆ ಬಂದ ಕೂಡಲೇ ಕೆಲವು ಒಳ್ಳೆಯ ಕ್ರಮಗಳ ಜೊತೆಯಲ್ಲಿಯೇ ಸಿನೆಮಾ ನಟ ರಾಮರಾವ್ ಸರಕಾರ ನೌಕರದಾರರ ನಿವೃತ್ತಿ ವಯಸ್ಸನ್ನು 58 ರಿಂದ 55ಕ್ಕೆ ಇಳಿಸಿ ರಾಜ್ಯದ ಲಕ್ಷಾವಧಿ ನೌಕರದಾರರೊಳಗೆ ಅಸಮಾಧಾನವನ್ನುಂಟುಮಾಡಿದರು. ಒಂದೇ ದಿವಸದಲ್ಲಿಯೇ ಸರಕಾರಿ ಸೇವೆಯಲ್ಲಿದ್ದ 55 ವಯಸ್ಸಾದವರನ್ನೆಲ್ಲ ಮನೆಗೆ ಕಳುಹಿಸಿ ಕೊಟ್ಟರು. ಆಡಳಿತೆಯ ಮೇಲೂ ಇದು ಪರಿಣಾಮವನ್ನುಂಟುಮಾಡಿದ್ದಲ್ಲದೆ, ನೌಕರರನ್ನು ಹೋರಾಟದ ದಾರಿಗಿಳಿಸಿದೆ. ಸಮಾಲೋಚನೆಗಳಿಂದ ಪರಿಹಾರ ಕಂಡುಹಿಡಿಯಲು ಸಾಧ್ಯವಾಗದಾದಾಗ, ಇಡೀ ಆಡಳಿತವನ್ನೇ ಸ್ಥಗಿತಗೊಳಿಸುವಂತ ಸಂಘಟಿತ ಹೋರಾಟವನ್ನು ಆಂಧ್ರದ ಸರಕಾರಿ ನೌಕರದಾರರು ಕೈಗೊಂಡಿದ್ದಾರೆ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಈ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡಿದೆ. ನೌಕರದಾರರಷ್ಟೇ ಅಲ್ಲ ಈಗ ಅಧಿಕಾರಿಗಳೂ ಈ ಮುಷ್ಕರದಲ್ಲಿ ಸಹಭಾಗಿಗಳಾಗಿದ್ದಾರೆ.

ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ನೌಕರದಾರರ ಸೇವೆಯ ನಿಯಮಗಳಲ್ಲಿ ಸರಿಯಾದ ವಿಚಾರವಿಲ್ಲದೆ ಬದಲಾವಣೆಯನ್ನುಂಟು ಮಾಡುವುದು ನ್ಯಾಯಸಮ್ಮತವೇ, ಒಂದು ರಾಜ್ಯದಲ್ಲೇ ಆಗಲಿ ಕೇಂದ್ರದಲ್ಲೇ ಆಗಲಿ ಬೇರೆ ಬೇರೆ ಪಕ್ಷಗಳು ಅಧಿಕಾರಕ್ಕೆ ಬಂದಂತೆ ಸೇವಾ ನಿಯಮಗಳಲ್ಲಿ ತಿದ್ದುಪಡಿ ಮಾಡುತ್ತ ಹೋದರೆ, ಯಾವ ನೌಕರದಾರನೂ ನೆಮ್ಮದಿಯಿಂದ ನಿಚ್ಚಳ ಮನಸ್ಸಿನಿಂದ ಕೆಲಸ ಮಾಡಲು ಸಾಧ್ಯವಿಲ್ಲ. ಸರ್ವಿಸಿನಲ್ಲಿದ್ದವರಿಗೆ ಅವರು ನೌಕರಿಗೆ ಸೇರುವಾಗ ಇದ್ದ ನಿಯಮಗಳನ್ನು ಉಳಿಸಿಕೊಂಡು ಅದರಂತೆ ಅವರಿಗೆ ರಕ್ಷಣೆ ಕೊಡುವುದು ನ್ಯಾಯಸಮ್ಮತ. ಯಾವುದೇ ಹೊಸ ಸರಕಾರ ನೌಕರದಾರರ ಸೇವಾ ನಿಯಮದಲ್ಲಿ ಬದಲಾವಣೆ ತರಬಯಸಿದರೆ ಅದನ್ನು ಹೊಸದಾಗಿ ನೌಕರಿಗೆ ಸೇರಿಸಿಕೊಳ್ಳುವವರಿಗೆ ಅನ್ವಯಿಸಬೇಕೇ. ಇದು ಸೌಲಭ್ಯಗಳನ್ನು ಕಡಿಮೆ ಮಾಡುವುದು ಸರಿಯಲ್ಲವೆಂದು ನಮ್ಮ ದೇಶದ ಸಂವಿಧಾನ, ಕಾರ್ಮಿಕರ ವಿವಾದ ಕಾಯ್ದೆ ಸ್ಪಷ್ಟಪಡಿಸುತ್ತದೆ.

1975ರಲ್ಲಿ ಇಂದಿರಾಗಾಂಧಿ ದೇಶದಲ್ಲಿ ತುರ್ತು ಪರಿಸ್ಥಿತಿಯೆಂಬ ಹೇರಿಕೆ ಹಾಗೂ ಪಂಜಾಬ್, ಮಹಾರಾಷ್ಟ್ರಗಳಲ್ಲಿ ಕಾಂಗ್ರೆಸ್ ಪಕ್ಷದಿಂದ ಆಳಲ್ಪಡುತ್ತಿದ್ದ ರಾಜ್ಯಗಳಲ್ಲಿ ಸರಕಾರಿ ನೌಕರದಾರರ ನಿವೃತ್ತಿ ವಯಸ್ಸನ್ನು 60ಕ್ಕೆ ಏರಿಸಲಾಗಿತ್ತು, ಕೆಲವು ಕಡೆಗಳಲ್ಲಿ ಸರಕಾರ ಮತ್ತೆ 58-60ಕ್ಕೆ ಹೆಚ್ಚಿಸಲಾಯಿತು. ಕೇರಳದ ಸೇವೆಯಲ್ಲಿರುವವರ ನಿವೃತ್ತಿ ವಯಸ್ಸನ್ನು ಕೂಡ 58ರಿಂದ 60ರವರೆಗೆ ಇದೆ. ಈ ರೀತಿ ಇಂದಿರಾ ಗಾಂಧಿ ಪಕ್ಷದ ಆಡಳಿತೆ ಅಸಂಬದ್ಧ ನಿಯಮಗಳನ್ನು ಅನುಸರಿಸಿಕೊಂಡು ಬರುತ್ತಿರುವಾಗ ಎನ್. ಟಿ. ರಾಮರಾವ್ ಅವರ ಸಾಲಿನಲ್ಲಿ ಸೇರಿಕೊಳ್ಳುವುದು ಸರಿಯಲ್ಲ. ಆದ್ದರಿಂದ ತೆಲುಗು ದೇಶಂ ಪಕ್ಷದ ಮುಖ್ಯಮಂತ್ರಿಯವರು ನೌಕರದಾರರ ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಬಗೆಹರಿಸುವುದು ಅತ್ಯಗತ್ಯ.

# ರಾಜ್ಯ ಡಿ. ವೈ. ಎಫ್. ಐ. ಚಟುವಟಿಕೆಗಳು

ಡಿ. ವೈ. ಎಫ್. ಐ. ಕರ್ನಾಟಕ ರಾಜ್ಯ ಸಂಘಟನಾ ಸಮಿತಿಯ ಸಭೆಯು 17-7-83ರಂದು ಧಾರವಾಡದಲ್ಲಿ ಸೇರಿ ಈ ಕೆಳಕಂಡಂತೆ ನಿರ್ಣಯಗಳನ್ನು ಅಂಗೀಕರಿಸಿದೆ.

1) 1983 ಜೂನ್ 9ರಂದು ದಕ್ಷಿಣ ಆಫ್ರಿಕಾದ ಸ್ವಾತಂತ್ರ್ಯ ಹೋರಾಟಗಾರರಾದ ಜೆರ್ರಿ ಮೊಸೋಲೋದಿ, ಸೈಮನ್ ಮೊಗೋಯಿರೇನ್ ಹಾಗೂ ಮಾರ್ಕೊಸ್ ಮೊಟಾವುಂಗ್ ಅವರುಗಳನ್ನು ಗಲ್ಲಿಗೇರಿಸಿರುವುದನ್ನು, ಅಲ್ಪ ಸಂಖ್ಯಾತ ಜನಾಂಗ ದ್ವೇಷಿ ಸರ್ಕಾರವನ್ನು ಖಂಡಿಸಿರುವುದಲ್ಲದೆ ನೆಲ್ಸನ್ ಮಾಂಡೇಲಾ ಅವರನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದೆ.

2) ಅಸ್ಸಾಂನ ಅಲ್ಪ ಸಂಖ್ಯಾತ ವಿರೋಧಿ ಹಾಗೂ ಪ್ರತ್ಯೇಕತಾ ಚಟುವಟಿಕೆಯನ್ನು ಖಂಡಿಸಿರುವುದಲ್ಲದೆ ಪ್ರಜಾ ಸತ್ತಾತ್ಮಕ ಶಕ್ತಿಗಳು ಒಗ್ಗೂಡಿ ಈ ಪ್ರತ್ಯೇಕತಾ ಚಳುವಳಿಯನ್ನು ವಿರೋಧಿಸಬೇಕೆಂದು ಕರೆ ನೀಡಿದೆ.

3) ವಿಜಯನಗರದ ಉಕ್ಕು ಕಾರ್ಖಾನೆ ಕರ್ನಾಟಕ ಜನತೆಯ ಮೂಲಭೂತ ಹಕ್ಕಾಗಿರುವುದನ್ನು ಮನಗಂಡಿರುವ ಡಿ. ವೈ. ಎಫ್. ಐ. ಜನಾಭಿಪ್ರಾಯವನ್ನು ಮೂಡಿಸಿ ಹೋರಾಟಕ್ಕಿಳಿಸಲು ಅಗಸ್ಟ್ 25 ರಂದು ರಾಜ್ಯಾದ್ಯಂತ ಜಿಲ್ಲೆಗಳ ಮಟ್ಟದಲ್ಲಿ ಮೆರವಣಿಗೆ, ಧರಣಿ ನಡೆಸಲು ತೀರ್ಮಾನಿಸಿದೆ.

4) ಇತ್ತೀಚೆಗೆ ಜನತಾ ಸರ್ಕಾರ 24 ಐ. ಟಿ. ಐ. ಗಳನ್ನು ಹೆಚ್ಚಾಗಿ ತಾಲ್ಲೂಕ್ ಮಟ್ಟದಲ್ಲಿ ತೆರೆಯಲು ನಿರ್ಣಯಿಸಿರುವುದನ್ನು ಸ್ವಾಗತಿಸಿರುವ ಡಿ. ವೈ. ಎಫ್. ಐ. ಇದು ಸ್ಥಳೀಯ ಯುವಜನರು ಉದ್ಯೋಗ ತರಬೇತಿಯನ್ನು ಪಡೆದು ಉದ್ಯೋಗಶೀಲರಾಗುವುದನ್ನು ಕಾಣಬಹುದಾದರೂ ಸರ್ಕಾರದ ನಿರ್ಣಯ ಸಕ್ರಮವಾಗಿ ಜಾರಿಯಾಗಬೇಕೆಂದು ಹೇಳಿದೆ.

5) ಜನತಾ ಸರ್ಕಾರ ತನ್ನ ಚುನಾವಣಾ ಭರವಸೆಯಂತೆ ಮತದಾನದ ವಯಸ್ಸನ್ನು 18 ವರ್ಷಕ್ಕೆ ಇಳಿಸಿರುವುದನ್ನೂ ಹಾಗೂ ನಗರಸಭಾ, ಪುರ

## ಡಿ.ವೈ.ಎಫ್.ಐ. ಚಟುವಟಿಕೆಗಳು

ಸಭೆಗಳಿಗೆ ಚುನಾವಣೆ ನಡೆಸುತ್ತಿರುದನ್ನು ಸ್ವಾಗತಿಸಿರುವ ಡಿ. ವೈ. ಎಫ್. ಐ. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಮತ ನೀಡಬೇಕೆಂದು ಜನತೆಗೆ ವಿನಂತಿಸಿ ಕರೆ ನೀಡಿರುವುದಲ್ಲದೆ ಅಂತಹ ಶಕ್ತಿಗಳ ಗೆಲುವಿಗಾಗಿ ಶ್ರಮಿಸಬೇಕೆಂದು ತನ್ನ ಎಲ್ಲಾ ಜಿಲ್ಲಾ ಘಟಕಗಳಿಗೆ ಕರೆ ನೀಡಿದೆ.

6) ಸಿಂಧ್ಯಾ ಸಮಿತಿಯ ವರದಿಯನ್ನು ಒಪ್ಪಿಕೊಂಡು ಜಾರಿ ಮಾಡದೆ ತಿರುಗು ಮುರುಗುಮಾಡಿ ಕ್ಯಾಪಿಟೇಷನ್, ಡೊನೇಷನ್ ಹಾವಳಿಯನ್ನು ರದ್ದು ಮಾಡುವುದಕ್ಕೆ ಬದಲಾಗಿ ಸ್ವಾಮ್ಯ ಸಂಸ್ಥೆಗಳು ಶಿಕ್ಷಣವನ್ನು ವ್ಯಾಪಾರದ ಮಾಧ್ಯಮವನ್ನಾಗಿ ಮಾಡಿಕೊಂಡಿರುವುದರ ಬಗ್ಗೆ ಸರ್ಕಾರದ ನಿಲುವು ಬಡ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯಲ್ಲೂ ಸಹಾಯಕವಾಗಲಾರದೆಂದು ಡಿ. ವೈ. ಎಫ್. ಐ. ಅಭಿಪ್ರಾಯಕ್ಕೆ ಬಂದಿದೆ.

# ಕಾರ್ಯಕರ್ತರಿಗೆ ರಾಜಕೀಯ ತರಗತಿ

14-7-83ರ ಸಂಜೆ ಶ್ರೀರಾಮಪುರಂ ಡಿ. ವೈ. ಎಫ್. ಐ. ಕಾರ್ಯಕರ್ತರಿಗೆ ನೀಲಗಿರಿ ಪಾಪಣ್ಣ ಬ್ಲಾಕ್‌ನಲ್ಲಿ ರಾಜಕೀಯ ತರಗತಿಯನ್ನು ನಡೆಸಲಾಯಿತು. ಕಾ। ಮೂರ್ತಿ ಅವರು ಸ್ವಾಗತಿಸಿದರು. ರಾಜ್ಯ ಸಂಚಾಲಕರಾದ ಕಾ। ಎಸ್. ಶಿವರಾಂ ಅವರು ಕಾರ್ಪೋರೇಷನ್ ಚುನಾವಣೆಯಲ್ಲಿ ಸಿ. ಪಿ. ಐ. (ಎಂ) ಬೆಂಬಲಿತ ಹಾಗೂ ಅವರ ಅಭ್ಯರ್ಥಿಗಳನ್ನು ಗೆಲ್ಲಿಸಬೇಕೆಂದು ವಿನಂತಿಸಿಕೊಂಡರು.

ರಾಜಕೀಯ ಉಪನ್ಯಾಸ ನೀಡಲು ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕಾ। ಶ್ರೀಕಾಂತ್ (ನವದೆಹಲಿಯ ಜೆ. ಎನ್. ಯು.), ಪಿ. ಹೆಚ್. ಡಿ. ಮಾಡುತ್ತಿದ್ದಾರೆ) ಅವರು 'ಪ್ರಸಕ್ತ ರಾಜಕೀಯ ವ್ಯವಸ್ಥೆಯಲ್ಲಿ ಯುವಜನರ ಪಾತ್ರ' ಎಂಬ ವಿಷಯದ ಮೇಲೆ ಮಾತನಾಡುತ್ತ, ಭಾರತೀಯ ಸ್ವಾತಂತ್ರ್ಯ ಹೋರಾಟ ಮತ್ತು ಅದರ ವಿಪರ್ಯಾಸ ಹಾಗೂ ಸ್ವಾತಂತ್ರ್ಯ ಹೋರಾಟವನ್ನು ಮುಂದುವರಿಸುವ ದೃಷ್ಟಿಕೋನ, ಪ್ರಸ್ತುತರಾಷ್ಟ್ರದಲ್ಲಿರುವ ರಾಷ್ಟ್ರೀಯ ಹಾಗೂ ಪ್ರಾಂತೀಯ ಪಕ್ಷಗಳು ಹಾಗೂ ಅವುಗಳುಪ್ರತಿಪಾದಿಸುವ ಬಂಡವಾಳ ಶಾಹಿ, ಭೂ ಮಾಲೀಕರ ಹಿತಾಸಕ್ತಿ ಮತ್ತು ಹಲವು ಕಮ್ಯೂನಿಸ್ಟ್ ಪಕ್ಷಗಳು ಅದರಲ್ಲೂ ಸಿ. ಪಿ. ಐ. (ಎಂ)ನ ಸರಿಯಾದ ರಾಜಕೀಯ ಧೋರಣೆ, ರೈತ-ಕಾರ್ಮಿಕರ ಪ್ರಜಾಸತ್ತಾತ್ಮಕ ಹೋರಾಟದಲ್ಲಿ ಡಿ. ವೈ. ಎಫ್. ಐ. ನ ಪಾತ್ರ ಮುಂತಾಗಿ ವಿವರಿಸಿದರು. ಕೊನೆಯಲ್ಲಿ ಶ್ರೀರಾಂಪುರ ಡಿ. ವೈ. ಎಫ್. ಐ. ಶಾಖೆಯ ಸಹ ಕಾರ್ಯದರ್ಶಿ ಕಾ। ಗುರುಸ್ವಾಮಿ ಅವರು ವಂದನಾರ್ಪಣೆ ಮಾಡಿದರು.

## ಕೋಲಾರದಲ್ಲಿ ಸಭೆ

16-7-83 ರಂದು ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಬೈರ ಬಂಡ ಎಂಬ ಹಳ್ಳಿಯಲ್ಲಿ DYFI ಸಭೆ ನಡೆಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಿಲ್ಲಾ ಸಂಚಾಲಕರೂ ಹಾಗೂ ರಾಜ್ಯ ಸಂಘಟನಾ ಸಮಿತಿಯ ಸದಸ್ಯರಾದ ಕಾ। ಕೆ. ವಿ. ಸತ್ಯನಾರಾಯಣ ಅವರು ಬಾಲ ಕಾರ್ಮಿಕರೂ, ಅರೆ ಉದ್ಯೋಗಿಗಳೂ, ಪೂರ್ಣ ಉದ್ಯೋಗಿಯಾದರೂ ಆತನಿಗಿರುವ ಹಲವಾರು ಸಾಮಾಜಿಕ ಸಮಸ್ಯೆಗಳೂ, ಕೃಷಿ-ಕೂಲಿಗಾರರಿಗೆ ಅಲ್ಪವೇತನಕ್ಕೆ ಸಿಗುವ ಕೆಲವೇ ತಿಂಗಳುಗಳ ಉದ್ಯೋಗ, ಪ್ರಸ್ತುತವಿರುವ ಇತರ ಯುವಜನ ಸಂಘಟನೆಗಳ ಚಟುವಟಿಕೆಗಳ ಮತ್ತು ಡಿ.ವೈ.ಎಫ್.ಐ.ನ ಧ್ಯೇಯೋದ್ದೇಶ ಹಾಗೂ ಅದರ ಐತಿಹಾಸಿಕ ಪಾತ್ರವನ್ನು ವಿವರಿಸಿದರು.

ಜನತೆಯ ಮೂಲ ಭೂತ ಹಕ್ಕಾದ ವಿಜಯನಗರ ಉಕ್ಕಿನ ಕಾರ್ಖಾನೆಯ ಬಗ್ಗೆ ಮಲತಾಯಿ ಧೋರಣೆಯನ್ನು ಅನುಸರಿಸುತ್ತಿರುವ ಕೇಂದ್ರವನ್ನು ಖಂಡಿಸಿದ ಅವರು ಡಿ. ವೈ. ಎಫ್. ಐ. ಕಳೆದ ಮೂರು ವರ್ಷಗಳಿಂದ ಕಾರ್ಖಾನೆಗಾಗಿ ಹೋರಾಡುತ್ತಿರುವುದನ್ನೂ ವಿವರಿಸಿದರು, ನಂತರ ಒಂದು ಸಂಘಟನಾ ಸಮಿತಿಯನ್ನು ರಚಿಸಲಾಯಿತು. ಸದಸ್ಯರುಗಳಾಗಿ ಬಿ. ವೆಂಕಟಸುಬ್ಬರೆಡ್ಡಿ, ಎನ್. ವೆಂಕಟರೆಡ್ಡಿ, ವಿ. ವೆಂಕಟರಮಣರೆಡ್ಡಿ, ವಿ. ಶಿವಾರೆಡ್ಡಿ, ಜಿ. ವಿ. ಕೃಷ್ಣಾರೆಡ್ಡಿ, ಸುಬ್ಬರಾಯಪ್ಪ, ಬಿ. ಎಂ. ಕೃಷ್ಣಪ್ಪ. ಪದಾಧಿಕಾರಿಗಳಾಗಿ ಅಧ್ಯಕ್ಷರು ಬಿ. ವೇಮರೆಡ್ಡಿ, ಉಪಾಧ್ಯಕ್ಷರು ಜಿ ವಿ. ಶ್ರೀರಾಮರೆಡ್ಡಿ, ಕಾರ್ಯದರ್ಶಿಯಾಗಿ ವಿ. ವೆಂಕಟರಮಣರೆಡ್ಡಿ, ಸಹ ಕಾರ್ಯದರ್ಶಿ ಎಂ. ವೆಂಕಟರಮಣ ರೆಡ್ಡಿ, ಖಜಾಂಚಿಯಾಗಿ ಜಿ. ಬಿ. ನಾರಾಯಣರೆಡ್ಡಿ ಅವರುಗಳನ್ನು ಆರಿಸಲಾಯಿತು.

## ಹೊಸಪೇಟೆಯಲ್ಲಿ ಸಭೆ

ದಿನಾಂಕ 7-7-83 ರಂದು ಹೊಸಪೇಟೆಯಲ್ಲಿ ಡಿ.ವೈ.ಎಫ್.ಐ. ಕಾರ್ಯಕರ್ತರ ಸಭೆ ನಡೆಯಿತು. ತಾಲ್ಲೂಕು ಸ್ಟೈಪೆಂಡರಿ ಪದವೀಧರರ ಸಂಘದ ಅಧ್ಯಕ್ಷರಾದ ಕಾಂ॥ ತಾಯಪ್ಪ ಅವರು ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಡಿ. ವೈ. ಎಫ್. ಐ. ಯನ್ನು ಎಲ್ಲ ಹಂತಗಳಲ್ಲೂ ಬೆಳೆಸಬೇಕೆಂದು ಹೇಳಿದರು. ಕಾಂ॥ ಶರಣಪ್ಪ ಕಟ್ಟಿ ಅವರು ಮಾತನಾಡುತ್ತ ಗ್ರಾಮಾಂತರ ಪ್ರದೇಶಗಳಲ್ಲಿ ಡಿ. ವೈ. ಎಫ್. ಐ. ಬೆಳೆಸುವ ಅಗತ್ಯವನ್ನು ವಿವರಿಸಿದರು.

ಜಿಲ್ಲಾ ಸಂಚಾಲಕರಾದ ಕಾಂ॥ ಜಂಬಯ್ಯನಾಯಕ ಅವರು ಮಾತನಾಡುತ್ತ ಕೃಷಿ-ಕೂಲಿಗಾರರು, ರೈತರು, ವಿದ್ಯಾರ್ಥಿ-ಯುವಜನರನ್ನೂ ಹಾಗೂ ಅಕ್ಷರಸ್ಥ, ಅನಕ್ಷರಸ್ಥರನ್ನೂ ಡಿ.ವೈ.ಎಫ್.ಐ. ಬಾವುಟದಡಿಯಲ್ಲಿ ತಂದು ವರ್ಗ ಜಾಗೃತಿಯನ್ನು ತರುವ ಮುಂಚೂಣಿಯಾಗಬೇಕೆಂದು ಹೇಳಿದರು. ಜಿಲ್ಲಾ ಸಹಸಂಚಾಲಕರಾದ ಕಾಂ॥ ರಾಮಚಂದ್ರನಾವಡ ಅವರು ಮಾತನಾಡುತ್ತಾ ಹಿಂದಿನ ನಮ್ಮ ಹೋರಾಟಗಳನ್ನು ವಿಮರ್ಶಿಸಿ ಮುಂದಿನ ಹೋರಾಟ ಬೆಳೆಸುವುದು ಹಾಗೂ ಡಿ. ವೈ. ಎಫ್. ಐ. ಯನ್ನು ಬಲಿಷ್ಟಗೊಳಿಸುವ ಪ್ರತಿಜ್ಞೆ ತೊಡಬೇಕೆಂದು ಹೇಳಿದರು.

ನಂತರ ಆಗಸ್ಟ್-83ರ ಹೊತ್ತಿಗೆ 500 ಸದಸ್ಯತ್ವವನ್ನು ನೋಂದಾಯಿಸಬೇಕೆಂದೂ, ಸ್ಟೈಪೆಂಡರಿ ಪದವೀಧರರ ಸಂಘಟನೆಯನ್ನು ಸ್ಥಳೀಯವಾಗಿ ಬಲಗೊಳಿಸಬೇಕೆಂದೂ, ಸಂಡೂರು ತಾಲ್ಲೂಕಿನ ತೋರಣಗಲ್ಲಿನಲ್ಲಿ ಡಿ.ವೈ.ಎಫ್.ಐ. ಪ್ರಾರಂಭಿಸಲು ಕಾಂ॥ ಜಂಬಯ್ಯ ಹಾಗೂ ಕಾಂ॥ ತಾಯಪ್ಪ ಅವರುಗಳನ್ನು ನಿಯೋಜಿಸಲು ಹಾಗೂ ಬೆಲೆ ಏರಿಕೆಯ ವಿರುದ್ಧ ಮತ್ತು ಜನಪರ ಹೋರಾಟಗಳಲ್ಲಿ ಇತರೇ ಯುವಜನ ಸಂಘಟನೆಗಳ ಜೊತೆಯಲ್ಲಿ ಐಕ್ಯ ಹೋರಾಟಗಳನ್ನು ಬೆಳೆಸಬೇಕೆಂದು ನಿರ್ಣಯಿಸಲಾಯಿತು.

# ಬಲ ಕಮ್ಯುನಿಸ್ಟರ ಸುಳ್ಳು ಆರೋಪಕ್ಕೆ ಉತ್ತರ

(5ನೇ ಪುಟದಿಂದ)

ಪ್ರಾಯ ವಿನಿಮಯವಾಯಿತು. ಅನೇಕ ವಿಷಯಗಳ ಬಗ್ಗೆ ಪರಸ್ಪರ ಏಕಭಿಪ್ರಾಯಕ್ಕೆ ಬರಲಾಯಿತು. ಎರಡನೆಯದಾಗಿ ಎರಡು ಪಕ್ಷಗಳು ಅನೇಕ ವಿಷಯಗಳ ಬಗ್ಗೆ ಭಿನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದುವು. ಮೂರನೆಯದಾಗಿ ಸಂಬಂಧಗಳ ಪುನರಾರಂಭಕ್ಕೆ ಮತ್ತು ವಿಸ್ತರಣೆಗೆ ಈ ವ್ಯತ್ಯಾಸಗಳು ಅಡ್ಡಿಯಾಗುವುದಿಲ್ಲ ಎಂದು ಪತ್ರಿಕಾ ಹೇಳಿಕೆ ತಿಳಿಸಿತ್ತು. ಇಂದರಿಂದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ರಾಷ್ಟ್ರೀಯ ಅಂತರ ರಾಷ್ಟ್ರೀಯ ಸಂಗತಿಗಳಲ್ಲಿ ತನ್ನ ಸಮ್ಮೇಳನದಲ್ಲಿ ಒಪ್ಪಿಕೊಂಡ ಅಭಿಪ್ರಾಯಗಳಿಗೆ ಬದ್ಧವಾಗಿದೆ ಎಂಬುದು ಸುಸ್ಪಷ್ಟ.

### ಒಂದು ದೊಡ್ಡ ಹೆಜ್ಜೆ

ಮೊದಲನೆ ಶ್ರಮಿಕ ರಾಜ್ಯವನ್ನು ಸ್ಥಾಪಿಸಿದ ಮತ್ತು ಎರಡನೇ ಮಹಾಯುದ್ಧದಲ್ಲಿ ಫ್ಯಾಸಿಸಂನ ಮೇಲೆ ವಿಜಯಗಳಿಸಿದ ರಷ್ಯಾದ ಮಹಾನ್ ಕ್ರಾಂತಿ ಚೀನಾದ ಕ್ರಾಂತಿಯ ತರುವಾಯ ಚರಿತ್ರೆಯ ಮಹತ್ವದ ಘಟನೆ ಎಂಬುದನ್ನು 'ನ್ಯೂ ಏಜ್' ಸಂಪಾದಕರು ಮರೆಯಬಾರದು ಚೀನಾಕ್ರಾಂತಿಯಿಂದ ಜಗತ್ತಿನ ವರ್ಗ ಶಕ್ತಿಗಳಲ್ಲಿ ದೊಡ್ಡ ಬದಲಾವಣೆಯಾಯಿತು. ಇದು 1957 ಮತ್ತು 1960ರ ಅಂತರ ರಾಷ್ಟ್ರೀಯ ದಸ್ತಾವೇಜುಗಳೇ ಮಾಡಿದ ವರ್ಣನೆ. ಈಗ ಚೀನಾ ಕಮ್ಯೂನಿಸ್ಟ್ ಪಕ್ಷ ಸಾಂಸ್ಕೃತಿಕ ಕ್ರಾಂತಿಯ ಸಮಯದಲ್ಲಿ ಆದ ವಿಪರೀತ ಹಾನಿಯನ್ನು ಮತ್ತು ಅಪಾಯವನ್ನು ತಿದ್ದಿಕೊಳ್ಳುವ ಮಿತಿಗಳನ್ನು ಮೀರುವ ಸಾಮರ್ಥ್ಯವನ್ನು ಪಡೆದಿದೆ ಎಂದು ರುಜುವಾತಾಗಿದೆ. ಸಮಾಜವಾದೀ ಸಮಾಜ ರಚನೆಯನ್ನು ಪುನಃ ಮುಂದುವರೆಸುತ್ತಿದೆ.

ಸಿ.ಪಿ.ಐ.(ಎಂ.) ನಂತೇ ಅನೇಕ ಪಕ್ಷಗಳು ಸಂಬಂಧವನ್ನು ಪುನರಾರಂಭಿಸಿವೆ. ಸಿ.ಪಿ.ಸಿ. ಮತ್ತು ಸಿ.ಪಿ.ಐ. (ಎಂ) ಗಳ ನಡುವಿನ ಸಂಬಂಧದ ಪುನರಾರಂಭ ಪರಸ್ಪರ ಚೆನ್ನಾಗಿ ಅರ್ಥ ಮಾಡಿಕೊಳ್ಳುವುದಕ್ಕೆ ಮತ್ತು ಅಭಿಪ್ರಾಯಗಳ ವಿನಿಮಯಕ್ಕೆ ಸಹಾಯ ಮಾಡುತ್ತದೆ. ಇದರಿಂದ ಮಾರ್ಕ್ಸ್‌ವಾದ ಲೆನಿನ್‌ವಾದ ಮತ್ತು ಶ್ರಮಿಕ ಅಂತರ ರಾಷ್ಟ್ರೀಯತೆಯ ಆಧಾರದ ಮೇಲೆ ವಿಶ್ವ ಕಮ್ಯುನಿಸ್ಟ್ ಚಳವಳಿಯ ಐಕ್ಯತೆಯನ್ನು ಸಾಧಿಸುವತ್ತ ನಡೆಯಲು ಸಾಧ್ಯವಾಗುತ್ತದೆ. ಆದುದರಿಂದ ನಮ್ಮ ಪಕ್ಷ ಎರಡೂ ಪಕ್ಷಗಳ ನಡುವಿನ ಸಂಬಂಧದ ಮಹತ್ವದ ಹೆಜ್ಜೆ ಎಂದು ಸ್ವಾಗತಿಸಿದೆ. ವಿಶ್ವ ಕಮ್ಯೂನಿಸ್ಟ್ ಚಳುವಳಿಯ ಐಕ್ಯತೆಯನ್ನು ಸಿ. ಪಿ. ಐ. (ಎಂ) ಯಾವಾಗಲೂ ಮುಖ್ಯವಾಗಿ ಕಂಡಿದೆ.

ಸಿ.ಪಿ.ಐ. ಇದರಲ್ಲಿ ಸಹಮತ ವ್ಯಕ್ತಪಡಿಸಲು ಸಾಧ್ಯವಿಲ್ಲ. ಏಕೆಂದರೆ ತನ್ನ ಅತ್ಯಂತ ಕಷ್ಟದ ದಿನಗಳಲ್ಲಿಯೂ ಚೀನಾ ವಿರೋಧೀ ನೀತಿಗೆ ಪಕ್ಕಾಗಲಿಲ್ಲ ಅಲ್ಲದೆ ಸೋವಿಯತ್ ಒಕ್ಕೂಟವನ್ನು ಸಮಾಜವಾದಿ ಸಾಮ್ರಾಜ್ಯಶಾಹಿ ಎಂದು ಮತ್ತು ಚೀನಾವನ್ನು ಮಿಲಿಟರಿವಾದಿ, ಅಧಿಪತ್ಯವಾದಿ ಎಂದು ಬಣ್ಣಿಸುವುದನ್ನು ವಿರೋಧಿಸಿತು. ಆದರೆ ಸಿ.ಪಿಐ. ನಮ್ಮ ದೇಶದ ಪ್ರಬಲ ಚೀನಾ ವಿರೋಧಿ ಶಕ್ತಿಯಾಗಿದೆ. ಪ್ರಪಂಚದ ಪ್ರತಿಯೊಂದು ಕಮ್ಯೂನಿಸ್ಟ್ ಪಕ್ಷವೂ ಪ್ರತಿಯೊಂದು ಸಮಾಜವಾದಿ ಪಕ್ಷವೂ ಚೀನಾ ಒಂದು ಸಮಾಜವಾದಿ ದೇಶವೆಂದು ಒಪ್ಪಿಕೊಂಡರೂ ಕೂಡ ತಾನೇ ಹಾಕಿಕೊಂಡ ಬಂಧನದಿಂದ ಹೊರಬರಲಾರದಾಗಿದೆ.

ಮಾರ್ಕ್ಸ್‌ವಾದ ಮತ್ತು ಲೆನಿನ್‌ವಾದದ ಮೂಲ ತತ್ವಗಳ ನೆಲಗಟ್ಟಿನ ಮೇಲೆ ನಿಂತು, ಶ್ರಮಿಕ ಅಂತರ ರಾಷ್ಟ್ರೀಯತೆಗೆ ಅವಲಂಬಿಸಿ ವರ್ಗ ಸಾಹಚರ್ಯದ ವಿರುದ್ಧ ಹೋರಾಡುತ್ತಾ ಸಿ. ಪಿ. ಐ. (ಎಂ) ವರ್ಗ ಹೋರಾಟದ ನೀತಿಯನ್ನು ಅನುಸರಿಸುತ್ತಿದೆ. ಅನೇಕ ಸೈದ್ಧಾಂತಿಕ ರಾಜಕೀಯ ಹೋರಾಟಗಳಲ್ಲಿ ಯಶಸ್ವಿಯಾಗಿ ಸೆಣಸಾಡಿದೆ.

ತನ್ನ ಹತ್ತೊಂಭತ್ತು ವರ್ಷಗಳ ಅಸ್ತಿತ್ವದಲ್ಲಿ ಅನೇಕ ಸಾಧನೆಗಳನ್ನು ಮಾಡಿದೆ. ಭಾರತದ ವಸ್ತು ಸ್ಥಿತಿಗೆ ಮಾರ್ಕ್ಸ್‌ವಾದ ಲೆನಿನ್‌ವಾದವನ್ನು ಅಳವಡಿಸಿಕೊಳ್ಳುವುದನ್ನು ಮುಂದುವರಿಸುತ್ತಾ ಪ್ರಪಂಚದ ಎಲ್ಲ ಕಡೆ ಶಾಂತಿಯನ್ನು ಕೋರುವ ಎಲ್ಲ ಶಕ್ತಿಗಳಿಗೆ ಸ್ವಾತಂತ್ರ್ಯ ಹೋರಾಟಗಳಿಗೆ, ಪ್ರಜಾಪ್ರಭುತ್ವಕ್ಕೆ, ಸಮಾಜವಾದಕ್ಕೆ ತನ್ನ ಬೆಂಬಲವನ್ನೂ ಐಕಮತ್ಯವನ್ನು ವ್ಯಕ್ತಪಡಿಸುತ್ತದೆ.

# ಸದಸ್ಯರ ಮುಂದಿರುವ ಜವಾಬ್ದಾರಿ

(ಒಂದನೇ ಪುಟದಿಂದ)

ನಿಸ್ಟ್ ಪಾರ್ಟಿಗಳನ್ನು ಬಿಟ್ಟು ಬೇರೆ ಪಕ್ಷಗಳು ತಮ್ಮ ಉಮೇದುವಾರರಿಗೆ ಪಕ್ಷದ ಹೆಸರಿಡಲು ಹಿಂಜರಿದಿರುವುದು ಕಂಡು ಬಂದಿದೆ. ಕೆಲವೇ ಪುರಸಭೆಗಳಲ್ಲಿ ಪಕ್ಷಗಳ ಹೆಸರಲ್ಲಿ ಸ್ಪರ್ಧೆ ನಡೆಯುತ್ತಿದೆ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ 18ರಿಂದ 20 ಪುರಸಭೆಗಳಲ್ಲಿ ಪಾರ್ಟಿಯ ಹೆಸರಿನಲ್ಲೇ ಸ್ಪರ್ಧಿಸುತ್ತಿದೆ.

ನಗರ ಕಾರ್ಪೊರೇಶನ್ ಚುನಾವಣೆಗಳಲ್ಲಿ ಮಾತ್ರ ಪಕ್ಷಗಳು ಸ್ಪರ್ಧಿಗಿಳಿದಿವೆ.

ಪುರಸಭೆ, ಕಾರ್ಪೊರೇಶನ್ ಅಂದರೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳು ಪ್ರವೇಶಿಸಬಾರದು. ಹಾಗಾದಲ್ಲಿ ಕೆಳಗಿನ ಮಟ್ಟದವರೆಗೂ ರಾಜಕೀಯ ಕಚ್ಚಾಟ ಪ್ರವೇಶಿಸಿ ನಗರದ ಸುಧಾರಣೆಗೆ ಆತಂಕ ಉಂಟಾಗುತ್ತದೆ ಎಂದು ಬಹಳಷ್ಟು ಜನರ ವಾದವಾಗಿದೆ. ಆದರೆ ಈ ವಾದ ಸರಿಯಲ್ಲ. ಒಂದು ನಿಶ್ಚಿತ ಕಾರ್ಯಕ್ರಮ ಇಲ್ಲದೆ, ವ್ಯಕ್ತಿ ಹಣ, ಮತ್ತು ಜಾತಿ ಆಧಾರದ ಮೇಲೆ ಚುನಾವಣೆ ನಡೆದು, ಅದರಲ್ಲಿ ಆರಿಸಿ ಬರುವವರು, ಅಧಿಕಾರದ ಆಸೆಯಿಂದ ಗುಂಪುಗಾರಿಕೆಗೊಳಗಾಗಿ ಅಸ್ಥಿರ ಆಡಳಿತ ಒದಗಿಸುತ್ತಾರೆ. ಸಮಸ್ಯೆಗಳು ಯಾವ ಪರಿಹಾರ ಕಾಣದೆ ನೆನೆಗುದಿಗೆ ಬೀಳುತ್ತದೆ. ಯಾವ ರಾಜಕೀಯ ಪಕ್ಷಗಳಿಗೂ ಸದಸ್ಯರ ಮೇಲೆ ಹತೋಟಿ ಇಲ್ಲದಂತಾಗುತ್ತದೆ. ಆದ್ದರಿಂದ ರಾಜಕೀಯ ಪಕ್ಷಗಳು ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ನೇರವಾಗಿ ಸ್ಪರ್ಧೆಗಿಳಿಯುವುದು ಅತ್ಯಗತ್ಯ. ಈಗ ನಡೆಯುತ್ತಿರುವ ಚುನಾವಣೆ ಆ ದೃಷ್ಟಿಯಲ್ಲಿ ಸ್ವಲ್ಪ ವೈಶಿಷ್ಟ್ಯ ಪಡೆದಿದೆ.

## ನಗರಸಭೆಗಳ ಸಮಸ್ಯೆಗಳು

ನಗರ ಸಭೆಗಳು ಹಲವಾರು ಸಮಸ್ಯೆಗಳನ್ನೆದುರಿಸುತ್ತಿವೆ. ಹಣಕಾಸು 'ಸಿಬ್ಬಂಧಿ'. ಸರಕಾರದ ಸಹಾಯ ಮುಂತಾದವುಗಳು.

ಆಕ್ಟ್ರಾಯ್ ರದ್ದಾದಂದಿನಿಂದ ಹೆಚ್ಚಿನ ನಗರಸಭೆಗಳೆಲ್ಲ ಭೀಕರ ಆರ್ಥಿಕ ಮುಗ್ಗಟ್ಟನ್ನೆದುರಿಸುತ್ತಿವೆ. ಆಸ್ತಿಕರ, ಮಾರ್ಕೆಟುಗಳಿದ್ದರೆ ಅವುಗಳಿಂದ ಬರುವ ಬಾಡಿಗೆಗಳೇ ಸದ್ಯ ನಗರಸಭೆಗಳಿಗಿರುವ ಆದಾಯದ ಮೂಲ. ನಗರಸಭೆಗಳು ನೀರು ಪೂರೈಸುತ್ತಿದ್ದರೆ ನೀರಿನ ಕರ. ಆಧುನಿಕ ಅನುಕೂಲತೆಗಳನ್ನು ನಾಗರೀಕರಿಗೆ ಒದಗಿಸಬೇಕಾಗಿದ್ದ ಈ ಕಾಲದಲ್ಲಿ ಇಷ್ಟೇ ಆದಾಯದಿಂದ ಆಡಳಿತ ನಡೆಸಿ ಜನರ ಆಶೋತ್ತರಗಳನ್ನು ಪೂರೈಸಲು ಸಾಧ್ಯವಿಲ್ಲ. ಬೆಲೆ ಹೆಚ್ಚಳದಿಂದಾಗಿ ಪ್ರತಿಯೊಂದು ಅಭಿವೃದ್ಧಿ ಕೆಲಸದ ಅಂದಾಜು ವೆಚ್ಚ ಹಲವಾರು ಪಟ್ಟು ಹೆಚ್ಚಾಗಿದೆ. ಇದರ ಜೊತೆಯಲ್ಲಿಯೇ ನಗರಸಭೆ ನೌಕರದಾರರ ಫೆಡರೇಶನ್ನಿನ ಸತತ ಪ್ರಯತ್ನದ ಫಲವಾಗಿ ಸರಕಾರಿ ನೌಕರರಿಗೆ ಸಿಗುವ. ಸಂಬಳ, ತುಟ್ಟಿ ಭತ್ತೆ ಇನ್ನಿತರ ಸೌಕರ್ಯಗಳು ನಗರ ಸಭೆ ಸಿಬ್ಬಂದಿಗೂ ಸಿಗುತ್ತಿರುವುದರಿಂದ ಆದಾಯದ ಶೇ. 60 ಕ್ಕಿಂತಲೂ ಹೆಚ್ಚಿನ ಹಣ ಇವರ ಸಲುವಾಗಿಯೇ ಖರ್ಚಾಗುತ್ತಿದೆ. ಕೆಲವು ನಗರಸಭೆಗಳಲ್ಲಿ ಆದಾಯ ಇಲ್ಲದ ಕಾರಣ ತಮ್ಮ ನೌಕರರಿಗೆ ಪ್ರತಿ ತಿಂಗಳು ಸಂಬಳ ಕೊಡಲು ಸಾಧ್ಯವಾಗುತ್ತಿಲ್ಲ. ಹೆಚ್ಚುತ್ತಿರುವ ವೇತನ, ತುಟ್ಟಿಭತ್ತೆಗಳನ್ನೂ ಒದಗಿಸಲು ಸಾಧ್ಯವಾಗುತ್ತಿಲ್ಲ.

ನಗರಕ್ಕೆ ನೀರು, ಒಳಚರಂಡಿ. ಮಾರ್ಕೆಟು, ಕಟ್ಟಡಗಳ ಸಲುವಾಗಿ ಹೆಚ್ಚಿನ ನಗರ ಸಭೆಗಳು ಸಾಲಪಡೆದಿವೆ. ಇಂಥ ಸಾಲ ಮರುಪಾವತಿ ಮಾಡಲೇ ಬೇಕಾಗುತ್ತದೆ. ಇದರ ಜೊತೆಯಲ್ಲಿ ಆದಾಯದಲ್ಲಿ ಸೋರಿ ಹೋಗುವುದು ಬಹಳಷ್ಟಿದೆ. ಹೀಗೆ ನಗರ ಸಭೆಗಳ ಆರ್ಥಿಕ ಪರಿಸ್ಥಿತಿ ಬಹಳ ಕೆಟ್ಟು ಹೋಗಿದೆ. ಇಂಥ ಪರಿಸ್ಥಿತಿಯಲ್ಲಿ ಹೊಸತಾಗಿ ಆರಿಸಿ ಬರುವ ಸದಸ್ಯರೆಲ್ಲ ಗಂಭೀರ ಪರಿಸ್ಥಿತಿಯನ್ನೆದುರಿಸಬೇಕಾಗುತ್ತದೆ.

ದೇಶದ ಹೆಚ್ಚಿನ ಸಂಪತ್ತನ್ನೆಲ್ಲ ಕೇಂದ್ರ ಸರಕಾರವೇ ಬುಟ್ಟಿಗೆ ಹಾಕಿಕೊಳ್ಳುವುದರಿಂದ, ರಾಜ್ಯಗಳ ಆದಾಯದಲ್ಲಿ ಕೊರತೆ ಉಂಟಾಗಿದೆಂದೂ, ರಾಜ್ಯ ಸರಕಾರಗಳಿಗೆ ಕೇಂದ್ರದಿಂದ ಆರ್ಥಿಕ ಸಹಾಯಸಿಗಬೇಕೆಂದೂ ರಾಜ್ಯಸರಕಾರಗಳು ಕೇಂದ್ರದ ಮೇಲೆ ಒತ್ತಡ ತರುತ್ತಿವೆ. ಹಾಗೆಯೇ ಹೆಚ್ಚಿನ ಸಂಪನ್ಮೂಲಗಳನ್ನು ರಾಜ್ಯಸರಕಾರ ಹಸ್ತಗತ ಮಾಡಿಕೊಂಡಿರುವುದರಿಂದ ನಗರ ಸಭೆಗಳು ಅತ್ಯಾವಶ್ಯಕವಾದ ಸೌಲಭ್ಯಗಳನ್ನೂ ನಾಗರಿಕರಿಗೆ ಒದಗಿಸದಂತಾಗಿದೆ, ಆದ್ದರಿಂದ ರಾಜ್ಯಸರಕಾರಗಳು ಪುರಸಭೆ - ಕಾರ್ಪೊರೇಶನ್‌ಗಳಿಗೆ ಹೆಚ್ಚಿನ ಧನ ಸಹಾಯ ನೀಡಬೇಕೆಂಬ ಬೇಡಿಕೆಯಿದೆ. ಸೇಲ್‌ಟ್ಯಾಕ್ಸ್ ಇನ್‌ಕಂಟ್ಯಾಕ್ಸ್‌ಗಳಲ್ಲಿ ಹಾಗೆಯೇ ಎಕ್ಸೈಸ್ ಕರದಲ್ಲೂ ಕೆಲವು ಪಾಲು ನಗರಸಭೆಗಳಿಗೆ ದೊರೆಯಬೇಕೆಂಬ ಬೇಡಿಕೆಗಳಿವೆ. ನೀರು ಸರಬರಾಜು, ಮೋರಿಕಟ್ಟೆಗಳು, ಒಳಚರಂಡಿ ಮುಂತಾದವುಗಳ ಜವಾಬ್ದಾರಿಯನ್ನು ಸರಕಾರವೇ ವಹಿಸಿಕೊಳ್ಳಬೇಕೆಂಬ ಸಲಹೆಗಳೂ ಮುಂದೆ ಬರುತ್ತಿವೆ.

ಈ ರೀತಿ ಹಣದ ಕೊರತೆಯನ್ನೆದುರಿಸುವುದರ ಜೊತೆಯಲ್ಲಿಯೇ ಇಂದಿನ ಪರಿಸ್ಥಿತಿಯಲ್ಲಿ ನಗರಸಭೆಗಳಿಗೆ ಹೆಚ್ಚಿನ ಅಧಿಕಾರ ಇಲ್ಲದಂತಾಗಿದೆ. ಖರ್ಚಿನ ವಿಷಯದಲ್ಲೂ, ನೌಕರರನ್ನು ನೇಮಿಸುವ, ಅವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವಲ್ಲಿ ನಗರಸಭೆಗಳ ಅಧಿಕಾರದಲ್ಲಿ ಬಹಳಷ್ಟು ಪ್ರತಿಬಂಧ ಹೇರಲಾಗಿದೆ, ಸರಕಾರ ಹೆಚ್ಚಿನ ಧನ ಸಹಾಯ ಕೊಡದಿದ್ದರೂ ಹೆಜ್ಜೆ ಹೆಜ್ಜೆಗೂ ತನ್ನ ಹಿಡಿತವನ್ನು ನಗರ ಸಭೆಗಳ ಖರ್ಚು, ಅಭಿವೃದ್ಧಿ ಕೆಲಸಗಳ ಮೇಲೆ ಹೇರುತ್ತಿರುವುದು ಹಾಗೆಯೇ ಸಿಬ್ಬಂಧಿಯ ಮೇಲೆ ಸರಕಾರವೇ ಹಿಡಿತ ಇಟ್ಟುಕೊಂಡಿರುವುದೂ ಸ್ಥಳೀಯ ಸಂಸ್ಥೆಗಳ ಸ್ವಾಯತ್ತಾಧಿಕಾರಕ್ಕೆ ಕತ್ತರಿ ಎಸಗಿದಂತಾಗಿದೆ. ನಿಜವಾದ ಅರ್ಥದಲ್ಲಿ ನಗರಸಭೆಗಳಿಗೆ ಸ್ವಾಯತ್ತಾಧಿಕಾರ ಕೊಡುವುದು ಅತ್ಯಗತ್ಯ.

## ಸರಕಾರದ ಕರ್ತವ್ಯ

ಆಕ್ಟ್ರಾಯಿ ರದ್ದಾದ ನಂತರ ಸರಕಾರದವರು ನಗರ ಸಭೆಗಳಿಗೆ ಆಕ್ಟ್ರಾಯಿ ರದ್ದಾಗುವಾಗ ಇದ್ದ ಆದಾಯದಲ್ಲಿ ಶೇ, 75ರಷ್ಟು ಹಣವನ್ನು ಸಹಾಯಧನವನ್ನಾಗಿ ಕೊಡುತ್ತಿದ್ದಾರೆ. ಇದನ್ನು ಪ್ರತಿ ತಿಂಗಳು ಕೊಡದೆ ಯಾವಾಗಾದರೊಮ್ಮೆ ಪಾವತಿ ಮಾಡುತ್ತಾರೆ. ನಗರಸಭೆಗಳು ಸಾಲಮರುಪಾವತಿ ಮಾಡುವುದಿದ್ದಲ್ಲಿ, ಆ ಹಣವನ್ನು ಸಾಲನೀಗಿಸಲು ಪಾವತಿ ಮಾಡಲಾಗುತ್ತಿದೆ. ಸಕ್ಕರೆ. ಬಟ್ಟೆ, ಸಿಮೆಂಟ್‌ಗಳ ಮೇಲೆ ಎಂಟ್ರಿಕರ ಹೇರಿ ಕೂಡಿಸಿದ ಹಣವನ್ನು ನಗರಸಭೆಗಳಿಗೆ ಈ ರೀತಿಯ ಪರಿಹಾರ ಧನವನ್ನಾಗಿ ಕೊಡಲಾಗುತ್ತದೆ. ಸಿನೆಮಾ ನೋಡುವುದರ ಮೇಲೆ ಹೇರಿದ ಕರವನ್ನೂ ನಗರಸಭೆಗಳಿಗೆ ಕೊಡುತ್ತಾರೆ. ನಗರಸಭಾ ಸದಸ್ಯರು ಜನರಿಗಿತ್ತ ಆಶ್ವಾಸನೆಗಳನ್ನು ಪೂರೈಸಬೇಕಾದರೆ ಇಷ್ಟೇ ಉತ್ಪನ್ನದಿಂದ ಸಾಧ್ಯವಿಲ್ಲ. ಬೇರೆ ರೀತಿಯ ಉತ್ಪನ್ನ ಮೂಲಗಳನ್ನು ಕಂಡುಹಿಡಿಯುವುದು ಅಗತ್ಯ ಹೆಚ್ಚು ಧನಸಹಾಯ ಒದಗಿಸದಿದ್ದರೆ ನಗರಸಭೆಗಳೆಲ್ಲ ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕೆಂದು ಹೇಳುವುದರಲ್ಲಿ ಅರ್ಥವಿಲ್ಲ.

ಆದ್ದರಿಂದ ಈ ಸಲ ಆರಿಸಿಬರುವ ನಗರಸಭೆ ಕಾರ್ಪೊರೇಶನ್‌ಗಳ ಸದಸ್ಯರು ಆದಾಯ. ಅಧಿಕಾರ, ಆಡಳಿತಗಳ ಕುರಿತು ಸಾಮೂಹಿಕವಾಗಿ ವಿಚಾರ ವಿನಿಮಯಮಾಡಿ ನಗರ ಸಭೆಗಳು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಲು ಬೇಕಾದ ವಾತಾವರಣ ಉಂಟುಮಾಡುವುದು ಅತ್ಯಗತ್ಯ.

---

### ತಿದ್ದುಪಡಿ

7ನೇ ಪುಟದಲ್ಲಿ ರಾಜ್ಯ ಡಿ. ವೈ. ಎಫ್. ಐ. ಚಟುವಟಿಕೆಗಳು ಎಂದಿರುವ ತಲೆ ಬರಹ ರಾಜ್ಯ ಡಿ. ವೈ. ಎಫ್. ಐ. ನಿರ್ಣಯಗಳು ಎಂದು ಓದಿಕೊಳ್ಳಿ ಹಾಗೆಯೇ 2ನೆಯ ಪುಟದ 5ನೇ ಕಾಲಂನ ಬಾಕ್ಸ್‌ನಲ್ಲಿ ಕಾಂ. ಸುಕೋಮಲ ಸೇನ್ ಎಂದಿರುವುದನ್ನು ಕಾ। ಸುಕೋಮಲಸೇನ್ ಎಂದು ಓದಿಕೊಳ್ಳಿ ತಪ್ಪಾದುದಕ್ಕೆ ವಿಷಾದಿಸುತ್ತೇವೆ.

—ವ್ಯವಸ್ಥಾಪಕ

---

ಹುಬ್ಬಳ್ಳಿ-ಧಾರವಾಡದಲ್ಲಿ

# ಜುಲೈ ೨೬ ರಂದು ಸಾರ್ವತ್ರಿಕ ಮುಷ್ಕರ

ಜುಲೈ 14ರಂದು ಬಿ. ಡಿ. ಕೆ. ಅಲಾಯ್ ಹಾಗೂ ಸುಂದತ್ರಾ ಕಾರ್ಮಿಕರ ಹೋರಾಟಗಳಿಗೆ ಬೆಂಬಲಾರ್ಥವಾಗಿ ಸಿ. ಐ. ಟಿ. ಯು ನೇತೃತ್ವದ ಜಂಟೀ ಕ್ರಿಯಾ ಸಮಿತಿಯು ಹುಬ್ಬಳ್ಳಿಯಲ್ಲಿ ಏರ್ಪಡಿಸಿದ ಬೃಹತ್ ಮೆರವಣಿಗೆ ಮತ್ತು ಬಹಿರಂಗ ಸಭೆಗಳು ಈ ಎರಡು ಹೋರಾಟಗಳನ್ನು ಹೊಸ ಎತ್ತರದ ಹಂತಕ್ಕೆ ತಲುಪಿಸಿವೆ. ಕಾರಣ, ಅಂದು ಸಿ. ಐ. ಟಿ. ಯು. ರಾಜ್ಯ ಸಮಿತಿ ಅಧ್ಯಕ್ಷ ಕಾ। ಎಸ್. ಸೂರ್ಯನಾರಾಯಣರಾವ್ ಅವರು ಜುಲೈ 26ರಂದು ಸಾರ್ವತ್ರಿಕ ಔದ್ಯೋಗಿಕ ಮುಷ್ಕರಕ್ಕಾಗಿ ಕರೆ ನೀಡಿದರು. ಸಂಜೆ 5–00 ಗಂಟೆಗೆ ಹೊಸೂರು ಕ್ರಾಸ್‌ನಿಂದ ಬಿ. ಡಿ. ಕೆ. ಅಲಾಯ್, ಸುಂದತ್ರಾ ಅಲ್ಲದೇ ಕಿರ್ಲೋಸ್ಕರ ಇಲೆಕ್ಟ್ರಿಕ್, ಮೈಸೂರು ಕಿರ್ಲೋಸ್ಕರು, ಏಕೆ ಇಂಡಸ್ಟ್ರೀಜ್, ಇಂಡಿಯನ್ ಪ್ಲೈವುಡ್ ಧಾರವಾಡ ಇತ್ಯಾದಿ ಹಲವಾರು ಕಂಪನಿಗಳ ಕಾರ್ಮಿಕರು ಮೆರವಣಿಗೆ ಪ್ರಾರಂಭಿಸಿದರು. ಮೆರವಣಿಗೆಯು ನಗರದ ಪ್ರಮುಖ ಬೀದಿಗಳನ್ನೆಲ್ಲ ಸುತ್ತಿ ಸಂಜೆ 6–30 ಗಂಟೆಗೆ ಈದಗಾ ಮೈದಾನ ಸೇರಿತು. ಅಲ್ಲಿ ನಡೆದ ಬಹಿರಂಗ ಸಭೆ ಕ್ರಾಂತಿಗೀತೆಯೊಂದಿಗೆ ಪ್ರಾರಂಭವಾಯಿತು. ಕಾ। ಸುಧೀಂದ್ರ ಸಕಲರಿಗೂ ಸ್ವಾಗತ ಕೋರಿದರು. ಕಾ। ವ್ಹಿ. ಎನ್. ಹಳಕಟ್ಟಿಯವರು ಎರಡೂ ಹೋರಾಟಗಳು ಹಾಗೂ ಅವುಗಳ ಬೆಂಬಲಾರ್ಥವಾಗಿ ಜಂಟೀ ಕ್ರಿಯಾ ಸಮಿತಿಯ ಕಾರ್ಯಕ್ರಮಗಳು ಬೆಳೆದು ಬಂದ ರೀತಿಯನ್ನು ಬಣ್ಣಿಸಿದರು. ಕೆ. ಇ. ಸಿ. ಪ್ರಧಾನ ಕಾರ್ಯದರ್ಶಿ ಕಾ। ಆರ್. ಬಿ. ಸ್ವಾದಿ ಮತ್ತು ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಕಾ। ಕೆ. ವ್ಹಿ. ರಾಯಚೂರ ಅವರು ಬೆಂಬಲ ಸೂಚಕ ಭಾಷಣಗಳನ್ನು ಮಾಡಿದರು. ನಂತರ ಮಾತನಾಡಿದ ಕಾ। ಸೂರಿಯವರು ತಮ್ಮ ಸುದೀರ್ಘ ಹಾಗೂ ಪ್ರಭಲ ಭಾಷಣದಲ್ಲಿ ಮೊದಲಿಗೆ ಮಹಾ ನಗರದಲ್ಲಿ ಬೆಳೆದು ಬರುತ್ತಿರುವ ಐಕ್ಯ ಕಾರ್ಮಿಕ ಹೋರಾಟಗಳನ್ನು ಸ್ವಾಗತಿಸಿದರು.

ಮುಂಬರುವ ಕಾರ್ಪೊರೇಶನ್ ಚುನಾವಣೆಗಳಲ್ಲಿ ಮಹಾ ನಗರದ ಕಾರ್ಮಿಕ ಜನತೆಯ ಬೆಂಬಲ ಬೇಕಾದಲ್ಲಿ ಮೊದಲು ಈ ಎರಡೂ ಹೋರಾಟಗಳನ್ನು ಕೂಡಲೇ ಸೂಕ್ತವಾಗಿ ಬಗೆಹರಿಸಬೇಕೆಂದು ಅವರು ಜನತಾ ಪಕ್ಷಕ್ಕೆ ಒತ್ತಾಯಿಸಿದರು. ಜುಲೈ 26ರ ಒಳಗಾಗಿ ಈ ಎರಡು ಹೋರಾಟಗಳನ್ನು ನ್ಯಾಯವಾಗಿ ಬಗೆ ಹರಿಸದಿದ್ದಲ್ಲಿ ಹುಬ್ಬಳ್ಳಿ–ಧಾರವಾಡದ ಸಕಲ ಕಾರ್ಮಿಕ ವರ್ಗ ಒಂದು ದಿನ ಔದ್ಯೋಗಿಕ ಮುಷ್ಕರಕ್ಕಿಳಿಯುವುದಾಗಿಯೂ, ಅವರು ಸರಕಾರಕ್ಕೆ ಗಡುವು ನೀಡಿದರು. ಕೊನೆಯಲ್ಲಿ ಕಾ। ವ್ಹಿ. ಎಂ. ಪೂಜಾರ ವಂದನಾರ್ಪಣೆ ಮಾಡಿದರು.

ತೆನ್ನಕ್ಕೆ ಬಿ. ಡಿ. ಕೆ. ಕಾರ್ಮಿಕರ ಮುಷ್ಕರ 84ನೇ ದಿನದಲ್ಲಿ ಹಾಗೂ ಸುಂದತ್ರಾ ಕಂಪನಿಯ ಲಾಕೌಟ್ 45ನೇ ದಿನದಲ್ಲಿ ಕಾಲಿಟ್ಟಿವೆ.

# ವಿಜಯನಗರ ಉಕ್ಕು ಕಾರ್ಖಾನೆ ಹಗರಣ

(ಒಂದನೇ ಪುಟದಿಂದ)

ವರ ಮೊಸಳೆ ಕಣ್ಣೀರಿನಿಂದ ಹೃದಯ ಕರಗಿ ಸುಮ್ಮನಿರುತ್ತಾರೆಂದು ಭಾವಿಸುವುದು ಮಾತ್ರ ತಪ್ಪು.

ಕರ್ನಾಟಕ ರಾಜ್ಯಕ್ಕೆ, ಕನ್ನಡಿಗರಿಗೆ ಮಾತ್ರವಲ್ಲ ಇಡೀ ದೇಶದ ಅಭಿವೃದ್ಧಿಯ ದೃಷ್ಟಿಯಿಂದ ನೋಡಿದರೆ ವಿಜಯನಗರ ಉಕ್ಕಿನ ಕಾರ್ಖಾನೆ ಕೂಡಲೇ ಪ್ರಾರಂಭವಾಗುವುದು ಅತ್ಯಗತ್ಯ. ಒಂದೇ ಜಿಲ್ಲೆ, ಒಂದೇ ರಾಜ್ಯ ಕೈಗಾರಿಕೆಯಲ್ಲಿ ಮುಂದೆ ಬರಬೇಕೆಂಬ ಸಂಕುಚಿತ ಭಾವನೆ ಸಮಗ್ರ ದೇಶದ ದೃಷ್ಟಿಕೋನವಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಗೆ ಎಂದಿಗೂ ಇಲ್ಲ, ಆದರೆ ಪ್ರಕೃತಿಯ ದೇಣಿಗೆ ಎಲ್ಲ ಕಡೆಯಲ್ಲಿಯೂ ಸರಿಸಮಾನವಾಗಿ ದೊರೆಯುತ್ತಿಲ್ಲ. ಕಬ್ಬಿಣ, ಅಲ್ಯುಮಿನಿಯಂ, ಬಂಗಾರ, ವಿದ್ಯುತ್ ಹೀಗೆ ದೇಶದ ಅಭಿವೃದ್ಧಿಗೆ, ಸ್ವಾವಲಂಬನೆಗೆ ಬೇಕಾದ ಕಚ್ಚಾಮೂಲಗಳು ಒಂದೇ ಕಡೆಯಿರುವುದಿಲ್ಲ. ಅವು ಎಲ್ಲಿ ಲಭ್ಯವಾಗುತ್ತಿವೆ, ಅಂಥಲ್ಲಿ ಅದರ ಉಪಯೋಗಕ್ಕೆ ಬೇಕಾದ ವ್ಯವಸ್ಥೆ ಮಾಡಲೇ ಬೇಕಾಗುತ್ತದೆ.

ಹೊಸಪೇಟೆಯಲ್ಲಿ ಅತಿ ಉತ್ತಮವಾದ ಕಬ್ಬಿಣದ ಅದಿರು ಲಭ್ಯವಿರುತ್ತಿರುವಾಗ. ದೇಶದ ಕೈಗಾರಿಕೆಗೆ ಉಕ್ಕು ಅತ್ಯಾವಶ್ಯಕವಾಗಿರುವಾಗ, ಸಂದರ್ಭ ಬಂದರೆ ಇಂಥ ಕಾರ್ಖಾನೆಗಳ ಸ್ಥಾಪನೆಗಾಗಿ ಕೆಲವು ಸಲ ಅಲ್ಪ ಕಾಲದ ಪರಿಹಾರಗಳನ್ನು ಕೆಲವು ಮಟ್ಟಿಗೆ ಬದಿಗಿರಿಸಿದರೂ ಪ್ರಜ್ಞಾವಂತ ಜನತೆ ಅದರ ಕುರಿತು ಯಾವುದೇ ತಕರಾರು ಮಾಡಲು ಶಕ್ಯವಿಲ್ಲ. ಇಂಥ ಕಾರ್ಯ ಆಗಲೇಬೇಕು, ದೇಶದ ದೃಷ್ಟಿಯಿಂದ ಅದು ಅತ್ಯಗತ್ಯ. ಬೇಕಾದಂಥ ತ್ಯಾಗ ಮಾಡಲೂ ನಾವು ಅದಕ್ಕೆ ಸಿದ್ಧರಿದ್ದೇವೆ ಎಂಬ ದೃಢ ನಿಲುವು ಕೇಂದ್ರ ಸರಕಾರಕ್ಕಿದ್ದರೆ, ಎಷ್ಟು ಕಠಿಣವಿದ್ದರೂ ಕೂಡ, ತೊಂದರೆಗಳಿದ್ದರೂ ಕೂಡ ಅಂಥ ಕಾರ್ಯ ಕೈಗೂಡಲು ಸಾಧ್ಯ. ಆದ್ದರಿಂದ ಮೊಯಿಲಿಯವರು ಕಣ್ಣೀರು ಸುರಿಸುವುದು ಬೇಡ. ಹೋರಾಟದ ಕಣಕ್ಕೆ ಧುಮುಕಲಿ.

Printed & Published by P. Ramachandra Rao by him on behalf of the Communist Party of India (Marxist) Karnataka State Committee V. Temple Street Sultanpet, Bangalore 560053. Editorial and managerial office : L-56, K. V. Temple Street, Sultanpet, B-53. Phone : 24154. Printed at Karnataka Pressmen Associates (P) Limited, 54/1, K. R. Road, Bangalore-4 Editor: P. RAMACHANDRARAO